ಸಂಪಾದಕ:ಎಸ್.ಕೆ.ಒಡೆಯರ್ ಸ್ವಾಭಿಮಾನಿಗಳಪತ್ರಿಕೆ www.pavitrapraja.com

# ಪವಿತ್ರ ಪ್ರಜಾ

PAVITRAPRAJA Daily RNI:KARKAN: 2007/22780 ದಿನಪತ್ರಿಕೆ

e-mail:pavitrapraja@gmail.com KA/SK/CTA-806/21-23 Davanagere 9141920642

ಸಂಪುಟ:19 ಸಂಚಿಕೆ: 143 ದಿನಾಂಕ 22-04-2026 ಬುಧವಾರ ಪುಟ:4 ರೂ.2-00 ಉಪಸಂಪಾದಕರು: ಸುಪ್ರಿತ ಎಸ್. ಒಡೆಯರ್ ಎಂಬಿಎ Vol:19 Issuse:143 Date:22-04-2026 Wednesday page:4 Rs:2-00 SubEditor: Supritha Wadeyar

## ನಾರಿ ಶಕ್ತಿ ವಂದನಾ ಅಧಿನಿಯಮ ವಿರೋಧ: ಕಾಂಗ್ರೆಸ್ ವಿರುದ್ಧ ಸಂಸದ ಡಾ. ಕೆ. ಸುಧಾಕರ್ ವಾಗ್ದಾಳಿ

**ಚಿಕ್ಕಬಳ್ಳಾಪುರ:**

ನಾರಿ ಶಕ್ತಿ ವಂದನಾ ಅಧಿನಿಯಮ ವಿರೋಧಿಸಿ ಮಹಿಳೆಯರಿಗೆ ಅನ್ಯಾಯ ಮಾಡಿದ ಕಾಂಗ್ರೆಸ್, ಮತ ಕೊಡಲು ಮಾತ್ರ ಮಹಿಳೆಯರು ಬೇಕಾ?

ಸಂಸದ ಡಾ.ಕೆ.ಸುಧಾಕರ್ ಆಕ್ರೋಶ

ಗೃಹಲಕ್ಷ್ಮಿ ಸಾಕು, ರಾಜಲಕ್ಷ್ಮಿ ಯಾಕೆ ಬೇಕು ಎಂದು ಕಾಂಗ್ರೆಸ್ ಭಾವಿಸಿದೆ, ಉಚಿತ ಬಸ್ ಸೀಟು ಕೊಡುತ್ತಾರೆ, ವಿಧಾನಸೌಧದಲ್ಲಿ ಸೀಟು ಕೊಡಲ್ಲ

ಚಿಕ್ಕಬಳ್ಳಾಪುರ, ಏಪ್ರಿಲ್ 21, ಮಂಗಳವಾರ




ಕಳೆದ 60 ವರ್ಷಗಳಿಂದ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ತರದ ಕಾಂಗ್ರೆಸ್, ನಾರಿ ಶಕ್ತಿ ವಂದನಾ ಅಧಿನಿಯಮವನ್ನು ವಿರೋಧಿಸಿ ಮಹಿಳೆಯರಿಗೆ ಅನ್ಯಾಯ ಮಾಡಿದೆ. ಮಹಿಳೆಯರಿಗೆ ಉಚಿತ ಬಸ್ ಸೀಟು ಕೊಡುವ ಕಾಂಗ್ರೆಸ್,

ವಿಧಾನಸೌಧಕ್ಕೆ ಹೋಗಲು ಸೀಟು ಕೊಡುವುದಿಲ್ಲ ಎಂದು ಸಂಸದ ಡಾ.ಕೆ.ಸುಧಾಕರ್ ಟೀಕಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರು ರಾಜಕೀಯದಲ್ಲಿ ಹೆಚ್ಚು ಭಾಗವಹಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ನಾರಿ ಶಕ್ತಿ ವಂದನಾ ಅಧಿನಿಯಮ ತಿದ್ದುಪಡಿ ಮಸೂದೆ ಜಾರಿ ಮಾಡಲು ಮುಂದಾಗಿದ್ದರು. ಆದರೆ ಕಾಂಗ್ರೆಸ್ ಸೇರಿದಂತೆ ಇಂಡಿ ಕೂಟದ ಸದಸ್ಯರು ಮಹಿಳೆಯರಿಗೆ ಮೀಸಲಾತಿ ನೀಡುವುದನ್ನು ವಿರೋಧ ಮಾಡಿದ್ದಾರೆ. 60 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿ ನೀಡಲಿಲ್ಲ. 1996 ರಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮಹಿಳಾ ಮೀಸಲಾತಿ ತರುವ ಪ್ರಯತ್ನ ಮಾಡಿದಾಗ, ಯಾರೂ ಬೆಂಬಲ ಕೊಡಲಿಲ್ಲ. ಇದೇ ರೀತಿ ಅಟಲ್ ಬಿಹಾರಿ ವಾಜಪೇಯಿ ಪ್ರಯತ್ನ ಮಾಡಿದ್ದರು. ಡಾ.ಮನಮೋಹನ್ ಸಿಂಗ್ ಕಾಲದಲ್ಲೂ ರಾಜ್ಯಸಭೆಯಲ್ಲಿ ಮಾತ್ರ ಮಸೂದೆ ಪಾಸ್ ಆಗಿತ್ತು. ಅಂತಿಮವಾಗಿ ಪ್ರಧಾನಿ ನರೇಂದ್ರ ಮೋದಿ ಮೊದಲ ಬಾರಿಗೆ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿರುವುದು ಇತಿಹಾಸ ಎಂದರು.

ಮಹಿಳೆಯರಿಗೆ 2,000 ರೂ. ಕೊಟ್ಟರೆ ಸಾಕು, ಅವರಿಗ್ಯಾಕೆ ರಾಜಕಾರಣ ಎಂದು ಕಾಂಗ್ರೆಸ್ ಅಂದುಕೊಂಡಿದೆ. ಗೃಹಲಕ್ಷ್ಮಿ ಸಾಕು, ರಾಜಲಕ್ಷ್ಮಿ ಯಾಕೆ ಬೇಕು ಎಂದು ಕಾಂಗ್ರೆಸ್ ಭಾವಿಸಿದೆ. ಒಂದು ಸಮುದಾಯದ ಪ್ರಗತಿಯನ್ನು ಅಳೆಯಬೇಕೆಂದರೆ, ಆ ಸಮುದಾಯದಲ್ಲಿನ ಮಹಿಳೆಯರ ಪ್ರಗತಿಯನ್ನು ಅಳೆಯಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು. ಬಿ.ಆರ್.ಅಂಬೇಡ್ಕರ್ ಹಿಂದೂ ಬಿಲ್ ಕೋಡ್ ತಂದಾಗ ಕಾಂಗ್ರೆಸ್ ಅದನ್ನು ವಿರೋಧಿಸಿತ್ತು.

ಇದು ಮಹಿಳೆಯರಿಗೆ 33% ಮೀಸಲು ನೀಡುವ ಮಸೂದೆಯಾಗಿದ್ದು, ಇದನ್ನು ಕಾಂಗ್ರೆಸ್ ಯಾಕೆ ವಿರೋಧಿಸುತ್ತಿದೆ? ಎಂದು ಪ್ರಶ್ನಿಸಿದರು.

ಉಜ್ವಲ ಯೋಜನೆಯಡಿ ಮಹಿಳೆಯರಿಗೆ ಅನಿಲ ಸಂಪರ್ಕ ನೀಡಲಾಗಿದೆ. 10 ಕೋಟಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಮಹಿಳೆಯರ ಹೆಸರಲ್ಲಿ 4 ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ. ಮುದ್ರಾ, ಲಕ್‌ಪತಿ ದೀದಿ ಮೊದಲಾದ ಯೋಜನೆಗಳು ಮಹಿಳೆಯರಿಗೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ನೆರವಾಗಿದೆ. ಇದರ ಜೊತೆಗೆ ರಾಜಕೀಯ ಶಕ್ತಿ ನೀಡಿದ್ದರೆ, ಮಹಿಳೆಯರು ಶಾಸಕರು, ಸಂಸದರು ಆಗುತ್ತಿದ್ದರು. ಇದರಿಂದ ದೊಡ್ಡ ಬದಲಾವಣೆಯಾಗುತ್ತಿತ್ತು. ಕಾಂಗ್ರೆಸ್ ಸರ್ಕಾರ ಬಸ್ ಸೀಟು ಕೊಟ್ಟರೆ ಸಾಕೆಂದು ಅಂದುಕೊಂಡಿದೆ. ಅದರ ಬದಲು ವಿಧಾನಸೌಧದಲ್ಲಿ ಸೀಟು ಕೊಡಬೇಕಿತ್ತು. ಮಹಿಳೆಯರು ಮನೆಯಲ್ಲಿ ಅಡುಗೆ ಮಾಡಲು ಸೀಮಿತ ಎಂದು ಕಾಂಗ್ರೆಸ್ ಅಂದುಕೊಂಡಿದೆ. ಮಹಿಳೆಯರು ಸಾಲಿನಲ್ಲಿ ನಿಂತು ಮತ ಮಾತ್ರ ಹಾಕಬೇಕು. ಮತ ಕೊಡಲು ಮಾತ್ರ ಮಹಿಳೆಯರು ಬೇಕು, ಮತ ಪಡೆಯಲು ಮಹಿಳೆಯರಿಗೆ ಅರ್ಹತೆ ಇಲ್ಲವೇ? ಈ ಮಸೂದೆಯ ಸೋಲು ದೇಶದ 70 ಕೋಟಿ ಮಹಿಳೆಯರ ಸೋಲು. ಮಸೂದೆ ಸೋತ ದಿನ ಭಾರತದ ಪ್ರಜಾಪ್ರಭುತ್ವದ ಕರಾಳ ದಿನ ಎಂದರು. ಎಲ್ಲಕ್ಕೂ ವಿರೋಧ

ಡಿಎಂಕೆ ಸದಸ್ಯರು ಉತ್ತರ-ದಕ್ಷಿಣ ಎಂದು ವಿಭಾಗ ಮಾಡಿದ್ದಾರೆ. ಈ ಹಿಂದೆ ಸಿಎಎ, 370 ರದ್ದು, ಜಿಎಸ್‌ಟಿ, ರಾಮಮಂದಿರ ನಿರ್ಮಾಣ, ರಾಷ್ಟ್ರೀಯ ಶಿಕ್ಷಣ ನೀತಿ ಮೊದಲಾದ ಸಂದರ್ಭಗಳಲ್ಲೂ ಇವರು ಹೀಗೆಯೇ ವಿರೋಧ ಮಾಡಿದ್ದರು. ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿ ಇಲ್ಲವಾದರೂ ಯುವಜನರು ಬೀದಿಗೆ ಬರುವಂತೆ ಮಾಡಿದ್ದಾರೆ. ಪ್ರಗತಿಪರ ಚಿಂತನೆಗೆ ಕಾಂಗ್ರೆಸ್ ಯಾವಾಗಲೂ ನಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಪಾಕಿಸ್ತಾನದ ವಿರುದ್ಧ ಸರ್ಜಿಕಲ್ ಸ್ಟ್ರೈಕ್, ಆಪರೇಶನ್ ಸಿಂದೂರ ಮೊದಲಾದ ಸಮಯದಲ್ಲೂ ವಿರೋಧ ಮಾಡಿದ್ದಾರೆ. ಕಾಂಗ್ರೆಸ್ ನಾಯಕರು ದೇಶದ ಪ್ರಗತಿಗೆ ಕಂಟಕವಾಗಿದ್ದಾರೆ. ಡಿಎಂಕೆ ಜೊತೆ ಕಾಂಗ್ರೆಸ್ ಸ್ನೇಹ ಹೊಂದಿದೆ. ಹಾಗಾದರೆ ಚುನಾವಣೆ ಮುಗಿಯುವ ವೇಳೆಗೆ ಮೇಕೆದಾಟು ಯೋಜನೆಗೆ ಒಪ್ಪಿಗೆ ಸಿಗಬಹುದು ಎಂದು ವ್ಯಂಗ್ಯವಾಡಿದರು.

2029 ರ ಚುನಾವಣೆ ವೇಳೆಗೆ ಮಹಿಳಾ ಮೀಸಲಾತಿ ತರಬೇಕೆಂಬ ಕಾರಣಕ್ಕೆ ಈ ತಿದ್ದುಪಡಿ ತರಲಾಗಿದೆ. ಸಂವಿಧಾನದ ವಿಧಿ 82 ರಲ್ಲಿ ಹೇಳಿರುವ ಪ್ರಕಾರ, ಜನಗಣತಿ ಬಳಿಕ ಮರುವಿಂಗಡಣೆಯ ಸಮಿತಿ ರಚಿಸಬೇಕು. ಜನಸಂಖ್ಯೆಯ ಆಧಾರದಲ್ಲೇ ಮರುವಿಂಗಡಣೆ ನಡೆಯಬೇಕೆಂದು ಹೇಳಲಾಗಿದೆ. ಹಾಗೆ ಮಾಡಿದ್ದರೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತಿತ್ತು. ಏಕೆಂದರೆ ದಕ್ಷಿಣದ ರಾಜ್ಯಗಳು ಜನಸಂಖ್ಯಾ ನಿಯಂತ್ರಣ ಮಾಡಿ ಆರ್ಥಿಕವಾಗಿ ಸುದೃಢವಾಗಿವೆ. ಐಟಿ ಕ್ಷೇತ್ರದಲ್ಲಿ ಕರ್ನಾಟಕ 40% ಪಾಲು ಹೊಂದಿದೆ. ಆದರೆ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯಾ ನಿಯಂತ್ರಣ ಸಮರ್ಪಕವಾಗಿ ಜಾರಿಯಾಗಿಲ್ಲ. ಜನಸಂಖ್ಯೆಯ ಆಧಾರದಲ್ಲೇ ಮಾಡಿದ್ದರೆ ಕರ್ನಾಟಕದಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುತ್ತಿತ್ತು. ಅದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮಸೂದೆಯಲ್ಲಿ ತಿದ್ದುಪಡಿ ತಂದು ಮತ್ತೆ ಮಂಡಿಸಿದ್ದಾರೆ. ಇದರಿಂದಾಗಿ ಎಲ್ಲ ರಾಜ್ಯಗಳಲ್ಲಿ ಶೇ.50 ರಷ್ಟು ಕ್ಷೇತ್ರ ಹೆಚ್ಚಿಸಲಾಗಿದೆ. ಇದು ಜಾರಿಯಾಗಿದ್ದರೆ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28 ರಿಂದ 42 ಕ್ಕೆ ಏರುತ್ತಿತ್ತು. ತಮಿಳುನಾಡಲ್ಲಿ 39 ರಿಂದ 59 ಕ್ಕೆ, ಕೇರಳದಲ್ಲಿ 20 ರಿಂದ 30 ಕ್ಕೆ ಏರಿಕೆಯಾಗುತ್ತಿತ್ತು ಎಂದರು.

ಜಿಬಿಎ ರಚನೆಯಲ್ಲಿ ಮತ ತಾರತಮ್ಯ

ಬೆಂಗಳೂರಿನ ಆಡಳಿತಕ್ಕೆ ಜಿಬಿಎ ರಚಿಸಿದ ಕಾಂಗ್ರೆಸ್ ಸರ್ಕಾರ ಐದು ಪಾಲಿಕೆಗಳನ್ನು ರಚಿಸಿದ್ದು, ವಾರ್ಡ್‌ಗಳ ಸಂಖ್ಯೆ 198 ರಿಂದ 369 ಆಗಿದೆ. ಕೊತ್ತನೂರು ವಾರ್ಡ್‌ನಲ್ಲಿ 10,926 ಮತದಾರರಿದ್ದರೆ, ರಾಜರಾಜೇಶ್ವರಿನಗರ ವಾರ್ಡ್‌ನಲ್ಲಿ 49,530 ಮತದಾರರಿದ್ದಾರೆ. ಇದರಿಂದಾಗಿ ಒಂದು ಮತ ಒಂದು ಮೌಲ್ಯ ಎಂಬ ತತ್ವಕ್ಕೆ ಧಕ್ಕೆಯಾಗಿದೆ. ಇದೇ ರೀತಿ ದೇಶದ ವಿವಿಧ ಕ್ಷೇತ್ರಗಳಲ್ಲೂ ತಾರತಮ್ಯವಾಗಿದೆ. ಸುಷ್ಮಾ ಸ್ವರಾಜ್, ಉಮಾ ಭಾರತಿ, ವಸುಂಧರಾ ರಾಜೇ, ಆನಂದಿ ಬೆನ್ ಪಟೇಲ್, ರಾಷ್ಟ್ರಪತಿ ದ್ರೌಪದಿ ಮುರ್ಮು ಹೀಗೆ ಅನೇಕ ಮಹಿಳೆಯರಿಗೆ ಬಿಜೆಪಿಯಿಂದ ಉನ್ನತ ಹುದ್ದೆಗಳ ಅವಕಾಶ ನೀಡಲಾಗಿದೆ. 60 ವರ್ಷ ಮಹಿಳೆಯರ ಬಗ್ಗೆ ಕರುಣೆ ತೋರಿದ ಕಾಂಗ್ರೆಸ್, ಮಹಿಳಾ ಮೀಸಲಾತಿಯನ್ನು ವಿರೋಧ ಮಾಡಿ ಮುಖವಾಡ ಕಳಚಿಕೊಂಡಿದೆ. ಒಬಿಸಿ ಬಗ್ಗೆ ಮಾತಾಡುವ ರಾಹುಲ್ ಗಾಂಧಿಯವರು ಮಂಡಲ್ ವರದಿಯನ್ನು ವಿರೋಧಿಸಿದ್ದು ಯಾರೆಂದು ಹೇಳಬೇಕಿದೆ. ಈ ಹಿಂದೆ ಯುಪಿಎ ಹತ್ತು ವರ್ಷ ಆಡಳಿತದಲ್ಲಿದ್ದರೂ ಜಾತಿ ಸಮೀಕ್ಷೆ ಯಾಕೆ ಮಾಡಲಿಲ್ಲ? ಎಂದು ಪ್ರಶ್ನೆ ಮಾಡಿದರು.

ಕಾಂಗ್ರೆಸ್‌ನ ಈ ಧೋರಣೆಯಿಂದಾಗಿ ಮುಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು ಕಾಂಗ್ರೆಸ್ ಸಂಪೂರ್ಣವಾಗಿ ಸೋಲಲಿದೆ. ನಾಡಿನ ಮಹಿಳೆಯರು ತಮ್ಮ ಶಕ್ತಿಯನ್ನು ಕಾಂಗ್ರೆಸ್‌ಗೆ ತೋರಿಸಬೇಕಿದೆ. ಮಹಿಳೆಯರಿಗೆ 2,000 ರೂ. ನೀಡಿ ಅಲ್ಪತೃಪ್ತರನ್ನಾಗಿ ಇರಿಸಬೇಕೆಂಬ ಸಂಚನ್ನು ಕಾಂಗ್ರೆಸ್ ಮಾಡಿದೆ. ಇದನ್ನು ಮಹಿಳೆಯರು ವಿರೋಧಿಸಬೇಕು ಎಂದರು.

## ಮೈಸೂರಿನಲ್ಲಿ ಬಿ.ಇಡಿ ವಿದ್ಯಾರ್ಥಿಗಳಿಂದ ವಿಷಯಾಧಾರಿತ ನಾಟಕ ಪ್ರದರ್ಶನ: 95 ಮಂದಿ ಪ್ರಶಿಕ್ಷಣಾರ್ಥಿಗಳ ಭಾಗವಹಿಕೆ

**ಮೈಸೂರು :**



ಮೈಸೂರಿನ ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ದ್ವಿತೀಯ ವರ್ಷದ ಬಿ.ಇಡಿ ಪ್ರಶಿಕ್ಷಣಾರ್ಥಿಗಳಿಂದ ವಿವಿಧ ವಿಷಯಾಧಾರಿತ ನಾಟಕ ಪ್ರದರ್ಶನ ನಡೆಯಿತು. 17 ಮತ್ತು 18 ಏಪ್ರಿಲ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು 95 ವಿದ್ಯಾರ್ಥಿಗಳು ಭಾಗವಹಿಸಿದರು.

ಮುಖ್ಯ ಅತಿಥಿ ರಂಗಶಿಕ್ಷಕ ಶಾಲೋಮ್ ಸನ್ನುತರ್ ಅವರು ನಾಟಕವು ವಿದ್ಯಾರ್ಥಿಗಳಲ್ಲಿ ನಾಯಕತ್ವ, ಸೃಜನಶೀಲತೆ, ಆತ್ಮವಿಶ್ವಾಸ ಹಾಗೂ ಸಂವಹನ ಕೌಶಲ್ಯಗಳನ್ನು ಬೆಳೆಸುತ್ತದೆ ಎಂದು ಹೇಳಿದರು.

ಇತಿಹಾಸ, ಕನ್ನಡ, ಭೂಗೋಳ, ಭೌತಶಾಸ್ತ್ರ, ವ್ಯವಹಾರ ಮತ್ತು ಇಂಗ್ಲಿಷ್ ವಿಷಯಗಳ ಆಧಾರಿತ ನಾಟಕಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಅಂತೋಣಿ ಪೌಲ್ ರಾಜ್ ಸೇರಿದಂತೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಶ್ರೀ ಪಂಚಭೂತೇಶ್ವರ ಸುಕ್ಷೇತ್ರ ದೇವಾಲಯದ ಮಠದಲ್ಲಿ ಮಕ್ಕಳಿಗೆ ಸಂಸ್ಕಾರ ಜ್ಞಾನ ಶಿಬಿರ

**ಕೃಷ್ಣರಾಜಪೇಟೆ :**

ತಾಲ್ಲೂಕಿನ ಕಿಕ್ಕೇರಿ ಸಮೀಪದ ಬೆಡದಹಳ್ಳಿಯ ಶ್ರೀ ಪಂಚಭೂತೇಶ್ವರ ದೇವಾಲಯದ ಮಠದಲ್ಲಿ ಮಕ್ಕಳಿಗೆ ವಸತಿ ಸಹಿತ ಸಂಸ್ಕಾರ ಜ್ಞಾನ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು,



ಶಾಸಕ ಹೆಚ್ ಟಿ ಮಂಜು ಕಾರ್ಯಕದಮವನ್ನು ಉದ್ಘಾಟಿಸಿ ಮಾತನಾಡಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರದವನ್ನು ಕಲಿಕೆಯಾಗಬೇಕು ಅದೇ ರೀತಿ ಕಳೆದ ಮೂರು ವರ್ಷಗಳಿಂದ ಶ್ರೀ ಪಂಚಭೂತೇಶ್ವರ ಸುಕ್ಷೇತ್ರದಲ್ಲಿ ಪೀಠಾದ್ಯಕ್ಷರದ ಶ್ರೀ ರುದ್ರುಮುನಿ ಸ್ವಾಮೀಜಿ ರವರು ಮಕ್ಕಳಿಗೆ ಸಂಸ್ಕಾರದ ಅರಿವು ಮತ್ತು ಚಿತ್ರಕಲೆ, ಸಂಗೀತಾ, ನೃತ್ಯ ಸೇರಿದಂತೆ ಹತ್ತು ಹಲವು ಕಾರ್ಯಕ್ರಮದೊಂದಿಗೆ ಸುಮಾರು 50 ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಈ ಶಿಭಿರದ ಪ್ರಯೋಜನವನ್ನು ಮಕ್ಕಳು ಪಡೆದುಕೊಳ್ಳುವಂತೆ ತಿಳಿಸಿದ್ದರು,

ಶ್ರೀ ಪಂಚಭೂತೇಶ್ವರ ಸುಕ್ಷೇತ್ರ ಪೀಠಾದ್ಯಕ್ಷರಾದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ ಪ್ರತಿ ವರ್ಷದಂತೆ ದಾನಿಗಳ ಸಹಾರದೊಂದಿಗೆ ಊಟ ವಸತಿ ಸಹಿತ 10 ದಿನದ ಮಕ್ಕಳಿಗೆ ಸಂಸ್ಕಾರ ಶಿಭಿರ ಆಯೋಜನೆ ಮಾಡಲಾಗಿದ್ದು ಈ ಕಾರ್ಯಕ್ರಮಕ್ಕೆ ಧಾನಿಗಳು ಕೈಲಾದ ಸಹಾಯ ಮಾಡುವುದರ ಜೊತೆಗೆ ಮಕ್ಕಳ ಕಲಿಗೆ ಕೈ ಜೋಡಿಸುವಂತೆ ತಿಳಿಸಿದರು,

ಕಾರ್ಯಕ್ರಮದಲ್ಲಿ ಶ್ರೀ ರುದ್ರಮುನಿ ಸ್ವಾಮಿಜಿ, ಶಾಸಕ ಹೆಚ್ ಟಿ ಮಂಜು, ಟಿ ಎ ಪಿ.ಎಂ ಎಸ್ ನಿರ್ದೇಶಕ ದೀಲೀಪ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಜೇಗೌಡ, ಬಿ.ಜಿ.ಪಿ ತಾಲ್ಲೂಕು ಅಧ್ಯಕ್ಷ ಸಾರಂಗಿ ನಾಗಣ್ಣ, ಉದ್ಯಮಿ ಎಂ ಎಸ್ ಸುಬ್ರಹ್ಮಣ್ಯ, ಶಿಕ್ಷಕ ಮಹೇಶ್, ಗ್ರಾಮ ಪಂಚಾಯಿತಿ ಮಾಜಿ ಉಪಾದ್ಯಕ್ಷ ಸುನೀಲ್, ಶಿಕ್ಷಕ ಪ್ರಕಾಶ್, ಮಠದ ಕಾರ್ಯದರ್ಶಿ ಕಾಂತರಾಜು ಪತ್ರಕರ್ತರಾದ ಶ್ರೀನಿವಾಸ್, ಕಾಡುಮೆಣಸ ಚಂದ್ರು, ಕಿಕ್ಕೇರಿ ಶಂಭು, ಜಿ.ಪಿ. ರಾಜು, ಲೋಕೇಶ್. ವಿ, ನಾರ್ಗೋನಹಳ್ಳಿ ಸಾಯಿಕುಮಾರ್, ಹೊನ್ನೇನಹಳ್ಳಿ ರವಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು

## ರಾಜ್ಯಪತ್ರಕರ್ತ ಸಮ್ಮೇಳನ ಪ್ರಶಸ್ತಿ ವಿಜೇತ ಮೋಹನ್ ಕೃಷ್ಣರಿಗೆ ಅರಸೀಕೆರೆಯಲ್ಲಿ ಸನ್ಮಾನ

ಅರಸೀಕೆರೆ: ರಾಜ್ಯಪತ್ರಕರ್ತ ಸಮ್ಮೇಳನದಲ್ಲಿ ಪ್ರಶಸ್ತಿ ಪಡೆದ ತಾಲೂಕಿನವರೇ ಆದ ಪತ್ರಕರ್ತ ಮೋಹನ್ ಕೃಷ್ಣ ಅವರಿಗೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು.



ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋಹನ್ ಕೃಷ್ಣ ಹಾಗೂ ಅವರ ಪತ್ನಿ ಲತಾ ಭಾಗವಹಿಸಿ ಅಭಿನಂದನೆಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮೋಹನ್ ಕೃಷ್ಣ, ಪ್ರಶಸ್ತಿ ದೊರೆತಾಗಿಗಿಂತಲೂ ತಮ್ಮ ಹುಟ್ಟೂರಾದ ಅರಸೀಕೆರೆಯಲ್ಲಿ ಪತ್ರಕರ್ತರಿಂದ ಸನ್ಮಾನಿತರಾಗಿರುವುದು ಹೆಚ್ಚು ಸಂತೋಷ ತಂದಿದೆ. ಪ್ರಶಸ್ತಿಗಳು ವ್ಯಕ್ತಿಯ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ.

ಕಳೆದ ಮೂರು ದಶಕಗಳಿಂದ ಅರಸೀಕೆರೆ ಪತ್ರಕರ್ತರೊಂದಿಗೆ ಬೆಳೆದ ಒಡನಾಟವನ್ನು ಅವರು ಸ್ಮರಿಸಿದರು.

ಉದ್ಯಮಿ ರಾಘವೇಂದ್ರ ಮಾತನಾಡಿ, ಸಾಧನೆ ಮಾಡಿದವರನ್ನು ಗೌರವಿಸುವುದು ಸಂಘಟನೆಗಳ ಕರ್ತವ್ಯ. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದೆ. ಇಂತಹ ಕಾರ್ಯಕ್ರಮಗಳು ಯುವ ಪತ್ರಕರ್ತರಿಗೆ ಪ್ರೇರಣೆ ನೀಡುತ್ತವೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಆನಂದ್ ಮಾತನಾಡಿ, ಪತ್ರಕರ್ತರ ಸಾಧನೆಯನ್ನು ಗುರುತಿಸಿ ಗೌರವಿಸುವುದು ನಮ್ಮ ಉದ್ದೇಶ. ,

ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮವಾಗಿ ಕೆಲಸ ಮಾಡಲು ಪ್ರೇರಣೆಯಾಗುತ್ತವೆ. ಸಂಘವು ಸದಾ ಪತ್ರಕರ್ತರ ಹಿತಾಸಕ್ತಿಗಾಗಿ ಕೆಲಸ ಮಾಡಲಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ರಾಮಚಂದ್ರ, ಮಾಡಾಳು ಶಿವಲಿಂಗಪ್ಪ, ಕಣಕಟ್ಟೆ ಕುಮಾರ್, ಮಂಜುನಾಥ್, ಕಾರ್ಯದರ್ಶಿ ನವೀನ್, ಉಪಾಧ್ಯಕ್ಷ ಮಾಡಾಳು ಸ್ವಾಮಿ, ಹೇಮಂತ್ ಕುಮಾರ್ ಹಾಗೂ ಹಿರಿಯ ಪತ್ರಕರ್ತ ಜಗಣ್ಣ, ಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವರದಿಗಾರ ಜೀವನ್ ಕುಮಾರ್ ಅವರ ಹುಟ್ಟುಹಬ್ಬವನ್ನು ಸಹ ಆಚರಿಸಲಾಯಿತು.



ಕೋಲಾರ ತಾಲ್ಲೂಕಿನ ಮದ್ದೇರಿ ಗ್ರಾಮಪಂಚಾಯತಿಯ ವತಿಯಿಂದ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು

ಈ ಸಂದರ್ಭದಲ್ಲಿ ಪಿಡಿಓ, ಪಂಚಾಯತಿ ಸಿಬ್ಬಂಧಿ ಮತ್ತು ಗ್ರಾಮಸ್ಥರಿದ್ದರು .

## ಏ.30 ಹಾಗೂ ಮೇ 1 ರಂದು ಅಂಕೋಲಾ ಬಂಡಿಹಬ್ಬ



ಅಂಕೋಲಾ : ಪಟ್ಟಣದ ಶ್ರೀ ಶಾಂತಾದುರ್ಗೆ ದೇವಿಯ ಬಂಡಿಹಬ್ಬಕ್ಕೆ ಚಾಲನೆ ದೊರಕಿದ್ದು, ಪ್ರತಿದಿನ ಕಳಸ ಏಳಲಿದೆ. ಏ. 30 ಗುರುವಾರದಂದು ಬಂಡಿಹಬ್ಬ ನಡೆಯಲಿದೆ. ಹಾಗೇ ಮೇ 1 ಶುಕ್ರವಾರದಂದು ಹರಕೆಸೇವೆ ಜರುಗಲಿದೆ.

# ಕುಶಾವರ ಗ್ರಾ.ಪಂ.ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟ: ಅಧಿಕಾರಿ-ಗ್ರಾಮಸ್ಥರ ಸಭೆ. ಮದ್ಯ ಮಾರಾಟ 45 ಸಾವಿರ ಕೋಟಿ ರೂ. ಟಾರ್ಗೇಟ್ ಅಂತೆ

**ಬೇಲೂರು**

ತಾಲ್ಲೂಕಿನ ಕುಶಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಹಲವು ಅಂಗಡಿಗಳಲ್ಲಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವುದನ್ನು ತಡೆಯುವಂತೆ ಅಬಕಾರಿ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಗ್ರಾಮದ ಪ್ರಮುಖರು ಅಬಕಾರಿ ಅಧಿಕಾರಿಗಳು ಹಾಗೂ ಗ್ರಾಮಸ್ಥರ ಸಭೆ ನಡೆಸಿದರು.

ಸಭೆಯಲ್ಲಿ ಗ್ರಾಮಸ್ಥರು ತಮ್ಮದೇ ರೀತಿಯಲ್ಲಿ ನೋವು, ಆಕ್ರೋಶ ವ್ಯಕ್ತಪಡಿಸುತ್ತಿದ್ದ ನಡುವೆ ಮಾತನಾಡಿದ ಸಹಾಯಕ ಅಬಕಾರಿ ಅಧೀಕ್ಷಕ ರಘು ಅವರು, ನಮಗೂ ಜನ ಇಂತಿಷ್ಟು ಕುಡಿಯುತ್ತಾರೆ ಎಂಬ ಬಗ್ಗೆ ಟಾರ್ಗೆಟ್ ಇರುತ್ತದೆ, ರಾಜ್ಯದಲ್ಲಿ 45 ಸಾವಿರ ಕೋಟಿ ರೂ. ಮದ್ಯ ಮಾರಾಟದ ಟಾರ್ಗೆಟ್ ಇದೆ ಎಂದು ಹೇಳಿದ್ದು ಹುಬ್ಬೇರಿಸುವಂತೆ ಮಾಡಿತ್ತು.

ನಂತರ ಸಭೆಯಲ್ಲಿ ಮಾತನಾಡಿದ ಗ್ರಾಮದ ಯುವಕರು,

ಪ್ರಮುಖರು ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ರಾಜಾರೋಷವಾಗಿ ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ. ಕೇಳಿದರೆ ಅಧಿಕಾರಿಗಳಿಗೆ ಮಾಮೂಲು ಕೊಟ್ಟು ಮಾರಾಟ ಮಾಡುತ್ತಿದ್ದೇವೆ ಎನ್ನುತ್ತಾರೆ. ಮಾರುತಿ ವ್ಯಾನ್ ಒಂದರಲ್ಲಿ ಮದ್ಯವನ್ನು ಭರ್ತಿ ತುಂಬಿಕೊಂಡು ಬಂದು ಮನೆ,ಇಳಿಸಿ ಹೋಗುತ್ತಾರೆ. ಅಬಕಾರಿ ಅಧಿಕಾರಿಗಳು ತಿಂಗಳಿಗೆ ಒಮ್ಮೆ ಜೀಪಿನಲ್ಲಿ ಬಂದು ಗ್ರಾಮದೊಳಕ್ಕೆ ಬಾರದೆ ಹೊರಭಾಗದಲ್ಲಿ ಇದ್ದುಕೊಂಡು ಬೀಟ್ ಪುಸ್ತಕಕ್ಕೆ ಸಹಿ ಹಾಕಿ ಹೋಗುತ್ತಾರೆ, ವಿಶೇಷ ಎಂದರೆ ಯಾರು ಮದ್ಯ ಅಕ್ರಮವಾಗಿ ಮಾರಾಟ ಮಾಡುತ್ತಾರೋ ಅಂತಹವರ ಬಳಿಯೇ ಬೀಟ್ ಪುಸ್ತಕ ಕೊಟ್ಟಿದ್ದಾರೆ. ಬೇಲೂರಿನ ಮದ್ಯದಂಗಡಿಯಿಂದಲೇ ವಾಹನದಲ್ಲಿ ತಂದು ಮಾರಾಟ ಮಾಡುತ್ತಿದ್ದಾರೆ. ಇಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಾರೆ ಎಂದು ಯುವಕರು ಆಕ್ರೋಶ ವ್ಯಕ್ತಪಡಿಸಿದರು.

ಮದ್ಯ ಅತಿಯಾಗಿ ಕುಡಿದು ಮನೆಯಲ್ಲಿ ಗಲಾಟೆ ಮಾಡುವುದು, ಕೆಟ್ಟ ಪದ ಉಪಯೋಗಿಸಿ ಬೈಯ್ಯುತ್ತಾರೆ ಈ ರೀತಿಯಾದರೆ ಅವರ ಭವಿಷ್ಯ ಏನಾಗುತ್ತದೆ. ಹೊಡೆಯುವುದು, ಮಕ್ಕಳು ಓದಲು ಅವಕಾಶ ಇಲ್ಲದಂತೆ ಕೂಗಾಡುವುದು ಮಾಡಲಾಗುತ್ತಿದೆ,ಮದ್ಯ ಕುಡಿದು ಸತ್ತರೆ ಪರಿಹಾರ ಕೊಡುತ್ತೀರ ಎಂದು ಮಹಿಳೆಯರೊಬ್ಬರು ಅಬಕಾರಿ ಮಹಿಳಾ ಅಧಿಕಾರಿ ಪ್ರಮಿಳಾ ಅವರನ್ನು ಪ್ರಶ್ನಿಸಿದರು. ಮದ್ಯ ಕುಡಿದು ಕಳೆದ 6 ತಿಂಗಳಲ್ಲಿ 3 ಜನ ಯುವಕರು ಸಾವನ್ನಪ್ಪಿದ್ದಾರೆ. ಮುಂದೆ ಯಾರಾದರು ಸತ್ತರೆ ಅಬಕಾರಿ ಕಚೇರಿ ಮುಂದೆ ಶವ ಇಟ್ಟುಕೊಂಡು ಪ್ರತಿಭಟನೆ ಮಾಡುತ್ತೇವೆ. ಮನೆಯಲ್ಲಿ ಮಹಿಳೆಯರು ಮಹಿಳಾ ಸಂಘದಿಂದ ಸಾಲವಾಗಿ ತಂದಂತ ಹಣ ವಾಪಸ್ ಕಟ್ಟಲಾಗದ ಸ್ಥಿತಿಗೆ ಬಂದಿದ್ದಾರೆ. ಮಹಿಳೆಯರು ದುಡಿದು ತರುವ ಹಣವನ್ನು ಗಂಡಸರಿಗೆ ಕುಡಿಯಲು ಕೊಡಬೇಕಿದ್ದು ಹಣ ಕೊಡದಿದ್ದರೆ ಹಲ್ಲೆ ನಡೆಸುವುದು ಮಾಮೂಲಾಗಿದೆ ಎಂದು ಕೆಲವರು ದೂರಿದರು.

ಯಾರಾರ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂಬುದು ಅಧಿಕಾರಿ, ನೌಕರರಿಗೆ ತಿಳಿದಿರುತ್ತದೆ, ನಮ್ಮಿಂದ ಹೇಳಿಸಿ ನಿಷ್ಠೂರ ಮಾಡುವ ಅಗತ್ಯವಿಲ್ಲ. ಸರಕಾರಕ್ಕೆ ಆಧಾಯ ಬರಬೇಕೆಂದು ಬಲವಂತದಿಂದ ಮದ್ಯ ಕುಡಿಸುವುದು ಎಂದರೆ ಏನರ್ಥ, ಮದ್ಯವನ್ನು ವಾಹನದಲ್ಲಿ ವಾರಕ್ಕೆ 4 ಸಾರಿ ರಾಜಾರೋಷವಾಗಿ ತರುತ್ತಾರೆಂದರೆ ಏಕೆ ಹಿಡಿಯುತ್ತಿಲ್ಲ ಎಂದು ಪ್ರಶ್ನಿಸಿದರು. ಬೆಳಿಗ್ಗೆ 5 ಗಂಟೆಯಿಂದಲೇ ಮದ್ಯ ಸೇವನೆ ಆರಂಭವಾಗುತ್ತದೆ, ಮದ್ಯ ಕುಡಿಯಲಿಕ್ಕೆ ಕೊಟ್ಟು ಕೆಲಸ ಮಾಡಿಸಿಕೊಳ್ಳುವುದು ನಡೆಯುತ್ತಿದೆ. ಸರಿಯಾದ ಕೇಸು ಹಾಕಲಾಗುತ್ತಿಲ್ಲ.

ಸಿಎಲ್-2 ನಲ್ಲಿ ಪಾರ್ಸಲ್ ಚೌಡನಹಳ್ಳಿ ಗ್ರಾಮದ 10 ಮನೆಯಲ್ಲಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ನೀಡಿದರು.

ಅಬಕಾರಿ ಅಧೀಕ್ಷಕ ಪರಮೇಶ್ವರಪ್ಪ ಮಾತನಾಡಿ, ನೀವು ಹೇಳುತ್ತಿರುವುದು ರಾಜ್ಯದ ಸಮಸ್ಯೆ. ಸೂಕ್ಷ್ಮವಾಗಿ ನಮಗೆ ಬಂದು ಮಾಹಿತಿ ನೀಡಿ. ನೀವು ಮದ್ಯದ ವಾಹನ ಬಂದಿರುವ, ಅಂಗಡಿಯಲ್ಲಿ ಮಾರಾಟ ಮಾಡುವ ಬಗ್ಗೆ ವಿಚಾರವನ್ನು ಗೌಪ್ಯವಾಗಿ ಇಡಲಾಗುವುದು. ಬೇಲೂರಿನ ನಮ್ಮ ಕಚೇರಿಗೆ ಹೋಗಿ ಅಲ್ಲಿ ವಿಷಯ ತಿಳಿಸಿಬನ್ನಿ ಖಂಡಿತ ಸ್ಪಂಧಿಸುತ್ತೇವೆ ಎಂದರು. ಅಬಕಾರಿ ಸಹಾಯಕ ಅಧೀಕ್ಷಕ ರಘು ಮಾತನಾಡಿ, ಗ್ರಾಮದ ಬಗ್ಗೆ ಕಾಳಜಿ ಇಟ್ಟು ದೂರು ಹೇಳುತ್ತಿರುವುದು ಸಂತೋಷದ ವಿಷಯ, ನಿಮ್ಮ ಧೈರ್ಯಕ್ಕೆ ಮೆಚ್ಚುಬೇಕು. ನಮ್ಮ ಯಾವುದೇ ಸಿಬ್ಬಂದಿಯಾಗಲಿ ನಿಮ್ಮ ಮನವಿ ವಿರುದ್ಧ ಮಾಡಿದರೆ ತಿಳಿಸಿ.

ಕರಗಡ ಸಮೀಪದ ಮದ್ಯದಂಗಡಿಯೊಂದರಲ್ಲಿ ಕೆಲ ಯುವಕರನ್ನು ಮದ್ಯ ಕುಡಿಯುತ್ತಿರುವ ಬಗ್ಗೆ ಪ್ರಶ್ನಿಸಿದಾಗ ಸರ್, ನಮಗೆ ಹೆಣ್ಣು ಕೊಡುತ್ತಿಲ್ಲ ನೀವು ಮದುವೆ ಮಾಡುಸ್ತೀರ ಎಂದು ನಮ್ಮನ್ನೇ ಪ್ರಶ್ನಿಸಿದರು ಎಂದರೆ ಏನು ಮಾಡುವುದು ಎಂದು ಹೇಳಿದರು.



ಮಾತ್ರಕೊಡಬೇಕು,ಕೆಲವರ ಮೇಲೆ ಕೇಸು ಹಾಕಿದ್ದೇವೆ. ವಿದ್ಯಾರ್ಥಿನಿಯೊಬ್ಬರು ಅಪ್ಪ ಕುಡಿದು ಬಂದು ಹೊಡೆಯುತ್ತಾರೆ, ಬೈಯ್ಯುತ್ತಾರೆ ಎಂದು ನೋವು ವ್ಯಕ್ತಪಡಿಸಿದಳು. ದೂರು ಬಂದರೆ ಕ್ರಮ ಕೈಗೊಳ್ಳುತ್ತೇವೆ. ನಮಗೂ ರಾಜ್ಯದಲ್ಲಿ 45 ಸಾವಿರ ಕೋಟಿ ರೂ.ಗಳ ಮಾರಾಟದ ಟಾರ್ಗೇಟ್ ಕೊಟ್ಟಿರುತ್ತಾರೆ ಹಾಗಾಗಿ ಸ್ವಲ್ಪ ತೊಂದರೆಯಾಗಿದೆ. ಇಲ್ಲಿ ಸಿಬ್ಬಂದಿ ನೇಮಕ ಮಾಡ್ತೇವೆ ಎಂದು ಹೇಳಿದರು. ಪಿಎಸ್ಐ ಎಸ್‌ಜಿ ಪಾಟೀಲ್ 3 ವರ್ಷದಲ್ಲಿ ಕೇಸು ದಾಖಲಿಸಿರುವ ಮಾಹಿತಿ ನೀಡಿದರು.

ಗ್ರಾಮಸ್ಥರಾದ ಕೆ.ಸಿ.ಮಂಜುನಾಥ್ ಪಿಡಿಒ ರಿಯಾನ್‌ಪಾಷ, ಕೌಶಿಕ್,

ಬಿಜೆಪಿ ತಾ.ಅಧ್ಯಕ್ಷ ಕೌರಿ ಸಂಜಯ್, ಕೆಆರ್‌ಎಸ್ ಪಕ್ಷದ ಅಧ್ಯಕ್ಷ ಆದೇಶ್, ಕಾವ್ಯ, ಪುಟ್ಟರಾಜು, ಲೋಕೇಶ್, ಹರ್ಷವರ್ಧನ್, ರೇಣುಕುಮಾರ್, ಅಭಿಷೇಕ್ ಇತರರು ಇದ್ದರು.

ಬೇಲೂರು ತಾಲ್ಲೂಕು ಕುಶಾವರ ಗ್ರಾಮದಲ್ಲಿ ಅಬಕಾರಿ ಅಧಿಕಾರಿಗಳು ಹಾಗೂ ಗ್ರಾಮಸ್ಥರ ನಡುವೆ ಅಕ್ರಮ ಮದ್ಯ ಮಾರಾಟ ಕುರಿತು ನಡೆಯಿತು

# ಯುವಜನರಲಲ್ಲಿ ಶ್ರಮ ಸಂಸ್ಕೃತಿ ಅಭಿವೃದ್ಧಪಡಿಸಬೇಕಾದ ಅನಿವಾರ್ಯತೆ ಇದೆ: ಈಶ್ವರ ಖಂಡ್ರೆ

**ಬೀದರ್**

ಬೀದರ್: ಯುವಜನರು ಇಂದು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ಸಾಮಾಜಿಕ ಮಾಧ್ಯಮಗಳಲ್ಲಿ ಹಾಗೂ ದುಶ್ಚಟಗಳಲ್ಲಿ ಹೆಚ್ಚು ಶ್ರಮ ಹಾಕುತ್ತಿದ್ದು, ಇದರಿಂದ ಭಾರತೀಯ ಸಂಸ್ಕೃತಿ ವಿನಾಶದ ಅಂಚಿಗೆ ತಳ್ಳಲ್ಪಡುತ್ತಿದ್ದು, ಯುವಕರಲ್ಲಿ ಅಣ್ಣ ಬಸವಣ್ಣನವರ ಕಾಯಕ ಸಂಸ್ಕೃತಿ ಅಭಿವೃದ್ಧಿಪಡಿಸಬೇಕಾದ ಅನಿವಾರ್ಯತೆ ಇದೆ ಎಂದು ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ತಿಳಿಸಿದರು.

ನಗರದ ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿ ಉತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಹಾಗೂ ಬಚನ ಸಾಹಿತ್ಯದ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿರುವ ಅವರು, ಇಂದು ಜಗತ್ತಿನಲ್ಲಿ ಯುದ್ಧ, ಕೊಲೆ, ಸುಲಿಗೆ, ಅತ್ಯಾಚಾರ, ಶೋಷಣೆ, ದಬ್ಬಾಳಿಕೆ, ಅಂಧಾಚಾರ, ಭ್ರಷ್ಟಾಚಾರ ತಾಂಡವಾಡುತ್ತಿದ್ದು, ಇಂತಹ ಸಂದರ್ಭದಲ್ಲಿ ಜಾಗತಿಕ ವಾತಾವರಣ ತಿಳಿಗೊಳಿಸಲು ವಿಶ್ವಗುರು ಬಸವಣ್ಣನವರ ತತ್ವಗಳು ಅನಿವಾರ್ಯವಾಗಿದ್ದು, ಈ ಕಾರ್ಯ ಬಸವಣ್ಣನವರ ಕರ್ಮಭುಮಿ ಬಸವಕಲ್ಯಾಣದಿಂದಲೇ ಆರಂಭವಾಗಿದೆ.ಜಗತ್ತಿನ ಬಹುತೇಕ ರಾಷ್ಟ್ರಗಳು ಅನುಭವ ಮಂಟಪದ ಮಾದರಿಯ ಪ್ರಜಾಪ್ರಭುತ್ವ ಕಲ್ಪನೆಯನ್ನು ಅನುಸರಿಸುತ್ತಿವೆ. ಇದನ್ನು ಇನ್ನಷ್ಟು ಪರಿಣಾಮಕಾರಿ ರೀತಿಯಲ್ಲಿ ಪ್ರಚಾರ ಹಾಗೂ ಪ್ರಸಾರ ಮಾಡುವ ಅನಿವಾರ್ಯತೆ ಎಂದು ಹೇಳಿದರು.

ಬಸವಕಲ್ಯಾಧಲ್ಲಿ ನೂತನ ಅನುಭವ ಮಂಟಪದ ಕಾಮಗಾರಿ ವೇಗದಿಂದ ನಡೆಯುತ್ತಿದ್ದು, ಮುಂದಿನ ವರ್ಷ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆಗೊಳ್ಳಲಿದೆ. ಒಟ್ಟಿನಲ್ಲಿ ಬಸವಣ್ಣನವರ ಆಚಾರ, ವಿಚಾರಗಳು ಯುವಜನರ ಮನ ಮುಟ್ಟುವಂತಾಗಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ತಡೋಳಾ, ಮೇಹಕರ ಹಾಗೂ ಡೋಣಗಾಪುರ ಶ್ರೀಮಠಗಳ ಪೂಜ್ಯ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜಗಜ್ಯೋತಿ ಬಸವಣ್ಣನವರು ಜೀವನ ಸಂಸ್ಕೃತಿ



ಹಾಗೂ ಕಾಯಕ ಮತ್ತು ದಾಸೋಹದ ಸಂಸ್ಕೃತಿ ಪ್ರತಿಪಾದಿಸಿದರು. ಒಂದು ಲಕ್ಷದ ತೊಂಬತ್ತಾರು ಸಾವಿರ ಜಂಗಮರಿಗೆ ನಿತ್ಯ ದಾಸೋಹಗೈದು ದಾನ, ಧರ್ಮದ ದಾರಿ ತೋರಿದರು.

ಅಪ್ಪ ಬಸವಣ್ಣನವರು ಇಷ್ಟಲಿಂಗ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದ್ದರ ಪರಿಣಾಮ ಇಂದು ಜಾಗತಿಕ ವಾತಾವರಣ ಲಿಂಗಮಯವಾಗಲು ಸಾಧ್ಯವಾಗುತ್ತಿದೆ. ಮುಂದಿನ ವರ್ಷ ಅನುಭವ ಮಂಟಪ ಉದ್ಘಾಟನೆ ಸಂಸರ್ಭದಲ್ಲಿ ಕನಿಷ್ಠ 21 ಸಾವಿರ ಶರಣ, ಶರಣೆಯರು ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡುವ ಮೂಲಕ ಹೊಸ ಇತಿಹಾಸ ನಿರ್ಮಿಸಬೇಕಿದೆ ಎಂದರು.

ಇದೆ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಮ ಪ್ರಭುದೇವರ ವಚನವಾದ ಶಿವ ಗುರುವೆಂದು ಬಲ್ಲಾತನೆ ಗುರು ಎಂಬ ವಚನ ಪಠಣ ಮಾಡಿದರು.

ಪೌರಾಡಳಿತ ಹಾಗೂ ಹಜ್ ಸಚಿವ ರಹಿಮ್ ಖಾನ್, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿ.ಪಂ ಸಿಇಒ ಗಿರೀಶ ಬದೋಲೆ, ಎಸ್.ಪಿ ಪ್ರದೀಪ ಗುಂಟಿ, ಬಸವ ಸೇವಾ ಪ್ರತಿಷ್ಠಾನದ ಪೂಜ್ಯ ಡಾ.ಅಕ್ಕ ಗಂಗಾಂಬಿಕೆ, ಪ್ರಭುದೇವರು, ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಡಾ.ರಜನೀಶ ವಾಲಿ, ಪ್ರಧಾನ ಕಾರ್ಯದರ್ಶಿ ಶಶಿಧರ ಹೊಸಳ್ಳಿ, ಖಜಾಂಚಿ ಸಿದ್ರಾಮಯ್ಯ ಸ್ವಾಮಿ, ಎನ್. ಎಸ್.ಎಸ್.ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ, ಬವಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ ಬಾಬುವಾಲಿ, ಪ್ರಮುಖರಾದ ಗುರುನಾಥ ಕೊಳ್ಳೂರ, ಜಯರಾಜ ಖಂಡ್ರೆ, ಬಸವರಾಜ ಧನ್ನೂರ್, ದೀಪಕ ವಾಲಿ, ಧನರಾಜ ಹಂಗರಗಿ, ವಿಕ್ರಮ ಮುದಾಳೆ, ಸಂತೋಷ ಪಾಟೀಲ ಸೇರಿದಂತೆ ಸಾವಿರಾರು ಬಸವ ಭಕ್ತರು, ಬಸವಾನುಯಾಯಿಗಳು, ವೀರಶೈವ, ,ಲಿಂಗಾಯತ ಹಾಗೂ ಇತರೆ ಸಮಾಜದ ಪ್ರಮುಖರು ಮೆರವಣಿಗೆಯಲ್ಲಿ ಭಾಗವಹಿಸಿದರು. ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಮೂರು ಅಲಂಕೃತ ರಥಗಳಲ್ಲಿ ಬಸವಣ್ಣನವರ ಮೂರ್ತಿ, ಭಾವಚಿತ್ರದ ಮೆರವಣಿಗೆ ಹಾಗೂ ಒಂದು ರಥ-'ದಲ್ಲಿ ವಚನ ಸಾಹಿತ್ಯ ಇರಿಸಲಾಗಿತ್ತು. ಛತ್ರ ಚಾಮರಗಳು ಮೆರವಣಿಗೆಯ ಶೋಭೆ ದ್ವಿಗುಣಗೊಳಿಸಿದವು. ಹೆಣ್ಣು ಗಂಟೆಂಬದೆ ಎಲ್ಲರು ಬಸವಣ್ಣನವರ ಡಿಜೆ ಸೌಂಡ್ ಹಾಡುಗಳಿಗೆ ಹೆಜ್ಜೆ ಹಾಕಿದರು. ಬಾಜಾ ಬಜೆಂತ್ರಿಯೊಂದಿಗೆ ಮೆರವಣಿಗೆ ಅದ್ದೂರಿಯಾಗಿ ಜರುಗಿ-ತು. ಸಾಯಂಕಾಲ ಇದ್ದ ಕಾರಣ ವಾತಾವರಣ ತಂಪಾದ ಹಿನ್ನಲೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಇಡೀ ವಾತಾವರಣ ಬಸವಮಯ ವಾಗುವಂತೆ ಮಾಡಿದರು. ದಾರಿಉದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮ ಪಟ್ಟರು.

ಮೆರವಣಿಗೆಯು ಬಸವೇಶ್ವರ ವೃತ್ತದಿಂದ ಆರಂಭವಾಗಿ ಚೌಬಾರ, ಗವಾನ ಸರ್ಕಲ್, ಶಹಾಗಂಜ್ ಕಮಾನ್, ಅಂಬೇಡ್ಕರ್ ವೃತ್ತ, ಭಗತಸಿಂಗ್ ಚೌಕ್, ಮಹಾವೀರ ಸರ್ಕಲ್ ನಿಂದ ಪುನಃ ಬಸವೇಶ್ವರ ವೃತ್ತಕ್ಕೆ ಬಂದು ಮುಕ್ತಾಯಗೊಂಡಿತು.

# ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ: ಗಣ್ಯರ ಉಪಸ್ಥಿತಿ

**ಬೀದರ್**

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಶ್ರೀ ಶಂಕರಾಚರ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬೀದರ ದಕ್ಷಿಣ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಕರಾಳೆ, ಅಖಿಲ್ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಜಿಲ್ಲಾ ಅಧ್ಯಕ್ಷ ವೆಂಕಟೇಶ್ ಕುಲಕರ್ಣಿ ಹುಮನಾಬಾದ, ಮಹಾ ಸಂಘದ ಅಧ್ಯಕ್ಷ ರಮೇಶ್ ಕುಲಕರ್ಣಿ, ರಾಜ್ಯ ಸಂಘಟನಾ ಕಾರ್ಯದರ್ಶಿ



ಸತೀಶ್ ಕುಲಕರ್ಣಿ. ಕೋಲಾರ್. ರಾಜೇಶ್ ಕುಲಕರ್ಣಿ ಸದಾನಂದ ಜೋಶಿ. ಮನೋಹರ್ ದಂಡೆ. ರೇಖಾ ಕುಲಕರ್ಣಿ. ದೇವಿದಾಸ್ ಜೋಶಿ. ಸುನಿಲ್ ಕುಲಕರ್ಣಿ ಗೋಪಾಲ್ ಕುಲಕರ್ಣಿ ಭೀಸೆನರಾವ್ ಕಾಣಿಹಳ ಉಪೇಂದ್ರ ದೇಶಪಾಂಡೆ. ಗಿರೀಶ ಮೈಲ್ಲೂರಕ್ರ್. ಹಣಮಂತ ಕುಲಕರ್ಣಿ ಸಿದ್ರಾಮ್ ಸಿಂಡೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತ-ರಿದ್ದರು

# ಬೇಲೂರಿನಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಬಿಜೆಪಿ ಪ್ರತಿಭಟನೆ

**ಬೇಲೂರು.**

ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿ ಇಲ್ಲಿ ಭಾರತೀಯ ಜನತಾ ಪಕ್ಷದಿಂದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಶಾಸಕ ಹೆಚ್.ಕೆ.ಸುರೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗಿದರು. ನಂತರ ಮಾತನಾಡಿದ ಶಾಸಕ ಹೆಚ್.ಕೆ.ಸುರೇಶ್, ದೇಶದ ಶೇ.33 ಮೀಸಲು ತರುವ ಮೂಲಕ ಮಹಿಳೆಯರಿಗೆ ಸಂಸದ, ಶಾಸಕ ಸ್ಥಾನಮಾನ ದೊರೆಯಬೇಕೆಂಬ ಉದ್ದೇಶದಿಂದ ಪ್ರಧಾನಿ ನರೇಂದ್ರಮೋದಿ ಮೀಸಲು ಮಸೂದೆ ಮಂಡಿಸಿದೆ ಇದನ್ನು ವಿರೋಧಿಸಿರುವ ಕಾಂಗ್ರೆಸ್ ಮಿತ್ರಪಕ್ಷಗಳ ವರ್ತನೆ ಖಂಡನೀಯ. ಇಂದಿರಾಗಾಂಧಿ, ಸೋನಿಯಾಗಾಂಧಿ, ಪ್ರಿಯಾಂಕಗಾಂಧಿ ಹೆಣ್ಣಲ್ಲವೇ ಇವರ ಕುಟುಂಬದ ಮಹಿಳೆಯರಿಗೆ ಮಾತ್ರವೇ ಸ್ಥಾನಮಾನ ಇರಬೇಕಾ ಎಂದು ಪ್ರಶ್ನಿಸಿದರು.

ಮಹಿಳೆಯರು ಮೇಲೆ ಇದು ರಾಜಕೀಯ ದೌರ್ಜನ್ಯವಲ್ಲವೆ ಎಂದ ಶಾಸಕ ಸುರೇಶ್, ನಿಮಗೆ ದೇಶದ ಮಹಿಳೆಯರ ಮೇಲೆ ಗೌರವವಿದ್ದರೆ ಪ್ರಧಾನಿ ತರಲಿದ್ದ ಮೀಸಲು ಮಸೂದೆಗೆ ಬೆಂಬಲ ವ್ಯಕ್ತಪಡಿಸಿ. ಇಂದು 75



ಕೋಟಿ ಮಹಿಳೆಯರ ಪರವಾಗಿ ಇಂದು ಪ್ರತಿಭಟನೆ ನಡೆಸುತ್ತಿದ್ದೇವೆ. ಮಹಿಳೆಯ-ರಿಗೆ 2 ಸಾವಿರ ರೂ. ಕೊಟ್ಟು ಅಷ್ಟಕ್ಕೇ ಅಳೆಯಬಾರದು ಎಂದರು.

ತಾಲ್ಲೂಕು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಖಾಬಸವರಾಜು ಮಾತನಾಡಿ, ಪ್ರಧಾನಿ ನರೇಂದ್ರಮೋದಿ ಅವರು ಮಹಿಳಾ ಪರವಾಗಿ ಮಸೂದೆ ಮಂಡನೆ ಮಾಡಿದರೆ ವಿರೋಧಿಸುವಂತ ಕೀಳುಮಟ್ಟದ ರಾಜ-ಕೀಯ ಕಾಂಗ್ರೆಸ್ಸಿಗರದ್ದಾಗಿರುತ್ತೆ. ತಮ್ಮ ಕುಟುಂಬಕ್ಕಷ್ಟೇ ರಾಜಕೀಯ ಸ್ಥಾನಮಾನ ಇರಬೇಕೆಂಬ ದುರುದ್ದೇಶದಿಂದ ಮಹಿಳಾ ವಿರೋಧಿತನ ಪ್ರದರ್ಶಿಸಿದ್ದಾರೆ. ಎಲ್ಲಾ ಪಕ್ಷದಲ್ಲೂ ಮಹಿಳೆಯ-ರಿದ್ದು ಮೀಸಲು ಮಸೂದೆ ಎಲ್ಲರಿಗೂ ಅನುಕೂಲವಾಗುವ ಮಸೂದೆಯಾಗಿದೆ ಎಂಬ ಪರಿಜ್ಞಾನ ಕಾಂಗ್ರೆಸ್ ನಾಯಕ-ರಿಲ್ಲವಾಗಿದೆ. ಮುಂದಿನ ದಿನದಲ್ಲಿ ತಕ್ಕ ಉತ್ತರವನ್ನು ಮಹಿಳೆಯರು ಕೊಡಲಿದ್ದಾರೆಂದರು. ಪ್ರಮುಖರಾದ ಬಿ.ಕೆ.ಚಂದ್ರಕಲಾ ಮಾತನಾಡಿದರು. ತಾಲ್ಲೂಕು ಬಿಜೆಪಿ ಅಧ್ಯಕ್ಷ ಕೌರಿಸಂ-ಜಯ್, ನಗರಾಧ್ಯಕ್ಷ ಬಿ.ಕೆ.ಮೋಹನ್, ಪ್ರಮುಖರಾದ ಜಿ.ಕೆ.ಕುಮಾರ್, ಬಸವರಾಜು, ಇಂಪಚಂದ್ರಶೇಖರ್, ವಿನಯ್, ಮೀನಾಕ್ಷಿ, ರತ್ನ ಇತರರು ಇದ್ದರು.

ಬೇಲೂರಿನಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಬಿಜೆಪಿ ಪಕ್ಷದಿಂದ ಪ್ರತಿಭಟನೆ ನಡೆಸಲಾಯಿತು

# ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವುದು ನನ್ನ ಕರ್ತವ್ಯ, ನನ್ನ ಬದ್ಧತೆ ಮತ್ತು ನನ್ನ ಸಂಕಲ್ಪ : ಡಾ. ಶೈಲೇಂದ್ರ ಬೆಲ್ದಾಳೆ

**ಬೀದರ್:** ನಮ್ಮ ದೇಶ ಕೃಷಿ ಪ್ರಧಾನ ದೇಶ. ರೈತರು ನಮ್ಮ ದೇಶದ ಹೃದಯ. ಅವರ ಶ್ರಮದಿಂದಲೇ ನಾವು ಅನ್ನವನ್ನು ಪಡೆಯುತ್ತೇವೆ. ಆದರೆ ಇಂದಿಗೂ ಹಲವಾರು ರೈತರು ನೀರಿನ ಅಭಾವದಿಂದ ಸಂಕಷ್ಟಗಳನ್ನು ಎದುರಿಸುತ್ತಿರುವುದು ದುಃಖಕರ ಸಂಗತಿ ಹೀಗಾಗಿ ನಮ್ಮ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ನೀರಾವರಿ ಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಬಾಪುರ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆಯ ವತಿಯಿಂದ 202627ನೇ ಸಾಲಿನ ಯೋಜನೆಯಡಿ 5 ಕೋಟಿ ವೆಚ್ಚದಲ್ಲಿ 400 ಎಕರೆ ಜಮೀನಿಗೆ ನೀರು ಹರಿಸುವ ಏತ ನೀರಾವರಿಯ ಮಹತ್ವದ ನೀರಾವರಿ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ರೈತರು ದೇಶದ ಬೆನ್ನೆಲುಬು. ಅವರ ಶ್ರಮದಿಂದಲೇ ನಮ್ಮ ಬದುಕು ಸಾಗುತ್ತಿದೆ. ಆದರೆ ನೀರಿನ ಕೊರತೆಯಿಂದ ಅವರು ಎದುರಿಸುತ್ತಿರುವ ಸಮಸ್ಯೆಗಳು ನಮ್ಮೆಲ್ಲರಿಗೂ ತಿಳಿದಿವೆ. ಈ ಹಿನ್ನೆಲೆಯಲ್ಲಿ, ಈ ಯೋಜನೆ ರೈತರ ಬದುಕಿನಲ್ಲಿ ಹೊಸ ಆಶಾಕಿರಣವಾಗಿ ಪರಿಣಮಿಸಲಿದೆ.

ಈ ಯೋಜನೆಯಿಂದ ಬೆಳೆ ಉತ್ಪಾದನೆ ಹೆಚ್ಚಾಗುತ್ತದೆ, ರೈತರ ಆದಾಯದಲ್ಲಿ ಏರಿಕೆ ಕಾಣಿಸುತ್ತದೆ ಮತ್ತು ಅವರ ಆರ್ಥಿಕ ಸ್ಥಿತಿ ಮತ್ತಷ್ಟು ಬಲವಾಗುತ್ತದೆ. ನೀರಾವರಿ ಸೌಲಭ್ಯಗಳು ಹೆಚ್ಚಾದಂತೆ ಗ್ರಾಮೀಣ ಅಭಿವೃದ್ಧಿಗೆ ಹೊಸ ಚೈತನ್ಯ ಸಿಗುತ್ತದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತರ ಕಲ್ಯಾಣಕ್ಕೆ ಬದ್ಧವಾಗಿದೆ. ಈ ಯೋಜನೆ ಆ ಬದ್ಧತೆಯ ಸ್ಪಷ್ಟ ಉದಾಹರಣೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ




ಯೋಜನೆಗಳನ್ನು ಜಾರಿಗೆ ತರಲು ನಾವು ಸಂಕಲ್ಪ ಮಾಡಿದ್ದೇವೆ.

ರೈತರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯ ಒದಗಿಸುವುದು ಕೇವಲ ಸರ್ಕಾರದ ಕರ್ತವ್ಯವಲ್ಲ, ಅದು ನಮ್ಮೆಲ್ಲರ ಜವಾಬ್ದಾರಿಯೂ ಹೌದು. ನೀರು ಇದ್ದರೆ ಬೆಳೆ ಇದೆ, ಬೆಳೆ ಇದ್ದರೆ ಬದುಕು ಇದೆ. ಈ ಸತ್ಯವನ್ನು ನಾವು ಯಾವತ್ತೂ ಮರೆಯಬಾರದು.

ನೀರಾವರಿ ಯೋಜನೆಗಳ ಮೂಲಕ ರೈತರ ಭೂಮಿಗೆ ನೀರನ್ನು ತಲುಪಿಸುವುದು, ಅವರ ಆದಾಯವನ್ನು ಹೆಚ್ಚಿಸುವುದು ಮತ್ತು ಅವರ ಜೀವನಮಟ್ಟವನ್ನು ಸುಧಾ-ರಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ. ಈ ದಿಕ್ಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಮತ್ತು ಮುಂದುವರೆಯಲಿದೆ.

ನಾವು ರೈತರ ಬೆನ್ನಿಗೆ ನಿಂತು, ಅವರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ರೈತ ಬಲಿಷ್ಠನಾದರೆ ದೇಶ



ಬಲಿಷ್ಠವಾಗುತ್ತದೆ.

ಹೀಗಾಗಿ, ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವುದು ನನ್ನ ಕರ್ತವ್ಯ, ನನ್ನ ಬದ್ಧತೆ ಮತ್ತು ನನ್ನ ಸಂಕಲ್ಪ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಹಣಮಂತರಾವ ಪಾಟೀಲ, ಶಿವಕುಮಾರ ಸ್ವಾಮಿ, ಗುರುನಾಥ್ ರಾಜಗೀರ ಬಗದಲ, ಬಸವರಾಜ ಬೋರಾಳ, ಉದಯ ತೋರಣ, ಸಂತೋಷ ಹಳ್ಳಿಖೇಡ, ಚಂದ್ರಶೇಖರ ಪಾಟೀಲ, ರಾಜಶೇಖರ ನೌಬಾದೆ,ನಾಗರಾಜ ಪಾಟೀಲ, ರಾಜಕುಮಾರ ಪಾಂಚಾಳ, ಓಂಕಾರ ಸ್ವಾಮಿ, ಬಸವಣಪ್ಪ ಆಣದೂರ, ಕಾಶಿನಾಥ, ಶಿವಾನಂದ ಪಾಟೀಲ, ಶಾಮಣ್ಣ, ಜಗನಾಥ, ನಿತೀಶ್ ನಂದಕುಮಾರ, ರಾಚಪ್ಪ, ಶಾಂತಲಿಂಗಯ್ಯಾ ಸ್ವಾಮಿ, ಸಾಯಿನಾಥ ಪಾಟೀಲ, ಬಸವರಾಜ ಹೇಡೆ, ಶಿವಕುಮಾರ ಸುಲ್ತಾನಪುರ,ಪ್ರಶಾಂತ ರೆಡ್ಡಿ, ಸಚೀನ್, ಮೋಹನ, ವಿನೋದ, ಮತ್ತಿತರರು ಉಪಸ್ಥಿತರಿದ್ದರು.

# ಮೈಸೂರು ನಗರ ಬಿಜೆಪಿ ವತಿಯಿಂದ ಬಸವೇಶ್ವರ ಪುತ್ತಳಿಗೆ ಮಾಲಾರ್ಪಣೆ ಮಾಡಲಾಯಿತು

**ಮೈಸೂರು**



ಬಿಜೆಪಿ ನಗರ ಅಧ್ಯಕ್ಷರಾದ ಎಲ್ ನಾಗೇಂದ್ರ ಟ, ಮಾಜಿ ಮಹಾಪೌರರಾದ ಸಂದೇಶ್ ಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ರುದ್ರಮೂರ್ತಿ ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷರಾದ ರಾಕೇಶ್ ಭಟ್, ನಗರ ಉಪಾಧ್ಯಕ್ಷರಾದ ಮೈ.ಪು ರಾಜೇಶ್, ಕಾರ್ಯದರ್ಶಿ ಪುನೀತ್, ನಾಗೇಂದ್ರ, ಮಾಧ್ಯಮ ಸಹ ವಕ್ತಾರರಾದ ಸಂತೋಷ್, ಮುಖಂಡರಾದ ಖಂಡೇಶ್, ಕಿರಣ್ ಮಾದೇಗೌಡ, ದಾರಿಪುರ ಸುನಿಲ್, ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಪಿ. ಸೋಮಣ್ಣ, ಜೆ. ರಂಗೇಶ್, ಎ. ರಾಘವೇಂದ್ರ ಇದ್ದಾರೆ.

# ಜಲಜೀವನ್ ಮಿಷನ್ ಹಗರಣ ಆರೋಪ: ತನಿಖೆ ಆಗದಿದ್ದರೆ ಲೋಕಾಯುಕ್ತಕ್ಕೆ ದೂರು ಎಚ್ಚರಿಕೆ

**; ಕೋಲಾರ**



ಕೋಲಾರ ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಲ್ಲಿ ಭಾರೀ ಹಗರಣ ನಡೆದಿದೆ ಎಂದು ಕರ್ನಾಟಕ ರಿಪಬ್ಲಿಕನ್ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ. ಚಿಕ್ಕನಾರಾಯಣ ಆರೋಪಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಕಾಮಗಾರಿಗಳನ್ನು ಪೂರ್ಣಗೊಳಿಸದೆ ನಕಲಿ ಬಿಲ್ಲುಗಳ ಮೂಲಕ ಕೋಟ್ಯಾಂತರ ರೂಪಾಯಿ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಕ್ರಮ ಕೈಗೊಳ್ಳದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿ, ಹಗರಣದ ಕುರಿತು ಸಮಗ್ರ ತನಿಖೆ ನಡೆಸಬೇಕು, ಇಲ್ಲವಾದರೆ ರಾಜ್ಯಮಟ್ಟದಲ್ಲಿ ಹೋರಾಟ ನಡೆಸಿ ಉಪಲೋಕಾಯುಕ್ತರಿಗೆ ದೂರು ನೀಡುವುದಾಗಿ ಎಚ್ಚರಿಸಿದರು.

# ಸಂಜೆ ಸುನಾಮಿ ಪತ್ರಿಕೆ ಉತ್ತಮ ಬರಹಗಳನ್ನು ನೀಡುತ್ತಾ ಎತ್ತರಕ್ಕೆ ಬೆಳೆದು ನಿಲ್ಲಲಿ : ಶಿವಕುಮಾರಸ್ವಾಮೀಜಿ

**ಲಿಂಗಸುಗೂರು**



ಲಿಂಗಸಗೂರು: ಸಂಜೆ ಸುನಾಮಿ ಎನ್ನುವ ಸಂಜೆ ದಿನಪತ್ರಿಕೆಯನ್ನು

ಆರಂಭ ಮಾಡಿರುವುದು ಸಂತಸದ ವಿಷಯವಾಗಿದ್ದು ಲಿಂಗಸಗೂರು ತಾಲೂಕಿನಿಂದ ಹೊರಹೊಮ್ಮುತ್ತಿರುವುದು ಈ ಭಾಗದ ಶ್ರಮವೇ ಸರಿ ಸಂಜೆ ಸುನಾಮಿ ಪತ್ರಿಕೆ ಉತ್ತಮ ಬರಹಗಳನ್ನು ನೀಡುತ್ತಾ ಎತ್ತರಕ್ಕೆ ಬೆಳೆದು ನಿಲ್ಲಲಿ ಎಂದು ಬೇಡರಕಾರ್ಲಕುಂಟಿಯ ಕಾಲಜ್ಞಾನ ಮಠದ ಶಿವಕುಮಾರ ಮಹಾಸ್ವಾಮೀಜಿಗಳು ಹೇಳಿದರು

ಅವರು ಸಂಜೆ ಸುನಾಮಿ ಎನ್ನುವ ನೂತನ ಸಂಜೆ ದಿನಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿ ಸಂಪಾದಕರಾದ ಲಕ್ಷ್ಮಣ ಬಾರಿಕೇರ ರವರು ಪತ್ರಿಕಾಕ್ಷೇತ್ರದಲ್ಲಿ ಹಲವು ಪ್ರಯೋಗಗಳನ್ನು ಮಾಡುತ್ತಾ ಬಂದವರು ಇದೀಗ ಸಂಜೆ ಪತ್ರಿಕೆಯನ್ನು ಹೊರತಂದಿರುವುದು ಹೆಚ್ಚು ಸಂತಸವಾಗಿದೆ

ನಾಡಿನ ಸುದ್ದಿಗಳನ್ನು ತಲುಪಿಸುವ ಕೆಲಸ ಸುನಾಮಿ ರೀತಿಯಲ್ಲಿ ಬೃಹದಾಕಾರವಾಗಿ ನಿವೃಹಿಸಲಿ ಎಂದು ಹಾರಯಸಿದರು

ನಂತರ ಶಿಕ್ಷಕ ರಾಜನಗೌಡರು ಮಾತನಾಡಿ ಸಂಜೆ ಸುನಾಮಿ ಎಂಬ ಪತ್ರಿಕೆಯನ್ನು ಬೇಡರ ಕಾರಲಕುಂಟಿಯ ಕಾಲಜ್ಞಾನಮಠದಲ್ಲಿ ಪೂಜ್ಯ ಗುರುಗಳಿಂದ ಬಿಡುಗಡೆ ಮಾಡಿಸಿದ್ದು ಪತ್ರಿಕೆ ಉತ್ತಮ ರೀತಿಯಲ್ಲಿ ಸಮಾಜಕ್ಕೆ ಉತ್ತಮ ಸುದ್ದಿಗಳನ್ನು ನೀಡುತ್ತಾ ಸಮಾಜಸೇವೆಯಲ್ಲಿ ತೊಡಗಿಕೊಳ್ಳಲಿ ಎಂದರು

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಘನಮಠದಯ್ಯ ಸಂತೆಕಲ್ಲೂರು, ವಿರುಪಾಕ್ಷಪ್ಪ ಹೂಗಾರ,ಶಿಕ್ಷಕರಾದ ರಾಜನಗೌಡ. ,ಪತ್ರಕರ್ತರಾದ ಶ್ರೀಕಾಂತ,ಹನುಮೇಶ ಹೂಗಾರ,

# ಯುವಕರು ಬಸವಣ್ಣನವರ 'ಕಾಯಕವೇ ಕೈಲಾಸ' ಸಂದೇಶ ಅನುಸರಿಸಲಿ: ವೀರಭದ್ರ ಸ್ವಾಮೀಜಿ

ರಾಯಬಾಗ : ಬಸವಣ್ಣನವರು ಜಾತಿ ಭೇದ, ಅಂಧಶ್ರದ್ಧೆಗಳನ್ನು ತೊರೆದು, ಸಮಾನತೆ ಮತ್ತು ಮಾನವೀಯತೆಯ ಆಧಾರದ ಮೇಲೆ ಸಮಾಜ ಮುನ್ನಡೆಯಬೇಕು."ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ಸಂದೇಶವನ್ನು ಯುವಪೀಳಿಗೆ ಅನುಸರಿಸುವ ಮೂಲಕ ಅವರ ಆದರ್ಶಗಳನ್ನು ಪಾಲಿಸಿ ಉತ್ತಮ ಸಮಾಜದ ನಿರ್ಮಾತೃಗಳಾಗಬೇಕು.ಎಂದು ನಂದಿಕುರಳಿಯ ಪಂಚಲಿಂಗೇಶ್ವರ ಮಠದ ಶ್ರೀ ವೀರಭದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಬಾವನಸೌಂದತ್ತಿ ಗ್ರಾಮದ ಬಸವ ವೃತ್ತದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಆಶೀರ್ವಾಚನ ನೀಡಿದರು. ನಂತರ ಮಹಾದೇವ ಮಂದಿರದಲ್ಲಿ ಮಹಿಳೆಯರಿಂದ ತೊಟ್ಟಿಲು ಪೂಜೆಹಾಗೂ ಶಿವಭಜನೆ ಕಾರ್ಯಕ್ರಮ ಜರಗಿತು. ಸಾಯಂಕಾಲ ಸಾವಿರಾರು ಸಂಖ್ಯೆಯ ಮಹಿಳೆಯರಿಂದ ಕುಂಭಮೇಳ ಹಾಗೂ ವಾದ್ಯ ಮೇಳದೊಂದಿಗೆ ಬಸವ ಭಾವಚಿತ್ರದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಿಂದ ಅದ್ದೂರಿಯಾಗಿ ಜರುಗಿತು. ರಾತ್ರಿ ಸಾವಿರಾರು ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು. ಮುಖಂಡರಾದ ಧೂಳಗೌಡ ಪಾಟೀಲ, ಸತ್ಯಪ್ಪಾ ಭೀಷ್ಠೆ, ಕಾಕಾಸಾಹೇಬ ತಡಾಕೆ, ಚಿದಾನಂದ ಮಂಗಸೂಳೆ,ಪ್ರಕಾಶ ಭೀಷ್ಠೆ, ಶ್ರೀಶೈಲ ಡೊಂಗರೆ,ದಯಾನಂದ ಹಿರೇಮಠ ಸೇರಿದಂತೆ ಶಿವಭಜನೆ ತಂಡದವರು ಹಾಗೂ ಅನೇಕ ಶರಣ ಶರಣೆಯರು ಉಪಸ್ಥಿದ್ದರು.



ರಾಯಬಾಗ:ತಾಲೂಕಿನ ಬಾವನಸೌಂದತ್ತಿ ಗ್ರಾಮದಲ್ಲಿ ವಾದ್ಯ ಮೇಳದೊಂದಿಗೆ ಬಸವೇಶ್ವರರ ಭಾವಚಿತ್ರದ ಮೆರವಣಿಗೆ.

# ಕಾಮಗಾರಿಗಳ ವಿಳಂಬಕ್ಕೆ ಗದರಿಕೆ: ತಕ್ಷಣ ಚುರುಕುಗೊಳಿಸಲು ಅಧಿಕಾರಿಗಳಿಗೆ ಸೂಚನೆ



ಶಿವಮೊಗ್ಗ: ಇಂದು ಶಾಸಕರ ಕಚೇರಿಯಾದ ಕರ್ತವ್ಯ ಭವನದಲ್ಲಿ ನಡೆದ ಮಹಾನಗರ ಪಾಲಿಕೆ ಅಧಿಕಾರಿಗಳ ಹಾಗೂ ಗುತ್ತಿಗೆದಾರರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದ ವಿವಿಧ ಬಡಾವಣೆಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಕುಂಟುನೆಪ ಹೇಳುವುದನ್ನು ಬಿಟ್ಟು ಕೂಡಲೇ ಕಾಮಗಾರಿಗಳನ್ನು ಚುರುಕುಗೊಳಿಸಬೇಕು ಎಂದು ತಾಕೀತು ಮಾಡಿದರು.

"ಮಳೆಗಾಲ ಆರಂಭವಾಗುವ ಮೊದಲೇ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪೂರ್ಣಗೊಳ್ಳಬೇಕು. ಯಾವುದೇ ಬಡಾವಣೆಯಲ್ಲಿ ನೀರು ನಿಲ್ಲದಂತೆ ಅಥವಾ ಮ್ಯಾನ್‌ಹೋಲ್‌ಗಳಿಂದ ತೊಂದರೆಯಾಗದಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಬೇಕು," ಎಂದು ಅವರು

ಅಧಿಕಾರಿಗಳಿಗೆ ಆದೇಶಿಸಿದರು. ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳದಿದ್ದರೆ ಅಥವಾ ವಿಳಂಬ ಧೋರಣೆ ಮುಂದುವರಿಸಿದರೆ ಕಾನೂನು ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಯೋಜನೆಯ ಗುತ್ತಿಗೆದಾರರು ಉಪಸ್ಥಿತರಿದ್ದರು.

# ಬಸವಲಿಂಗಪ್ಪ ಜನ್ಮ ಶತಮಾನೋತ್ಸವ: ಅಂಬೇಡ್ಕರವಾದಿ ಹೋರಾಟಗಾರರಿಗೆ ಬಸವರಾಜ ಎಸ್. ಹೊರಟ್ಟಿ ಗೌರವ ಸಲ್ಲಿಕೆ

**ಬೆಂಗಳೂರು**ವಿಧಾನಸೌಧದ ಬ್ಯಾಕ್ವೆಟ್ ಹಾಲ್‌ನಲ್ಲಿ ನಡೆದ ಶ್ರೀ ಬಿ. ಬಸವಲಿಂಗಪ್ಪ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ ಮಾತನಾಡಿದರು. ಬಸವಲಿಂಗಪ್ಪ ಅವರು ಧೈರ್ಯಶಾಲಿ, ಅಂಬೇಡ್ಕರವಾದಿ ಚಿಂತನೆಯ ನಾಯಕನಾಗಿ ದಲಿತರು ಹಾಗೂ ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಡಿದವರು ಎಂದು ಅವರು ಸ್ಮರಿಸಿದರು.



ಅಸಮಾನತೆಯ ವಿರುದ್ಧ ನೇರವಾಗಿ ಧ್ವನಿ ಎತ್ತಿದ ಅವರು ಸಾಮಾಜಿಕ ನ್ಯಾಯದ ಪರವಾಗಿ ರಾಜಕೀಯವನ್ನು ರೂಪಿಸಿದ ಮಹಾನ್ ನಾಯಕರು ಎಂದು ಹೊರಟ್ಟಿ ಹೇಳಿದರು. ಬಸವಲಿಂಗಪ್ಪ ಅವರ ಜೀವನವು ದಮನದಿಂದ ಗೌರವದತ್ತ ಸಾಗಿದ ಪರಿವರ್ತನೆಯ ಸಂಕೇತವಾಗಿದ್ದು, ಯುವಜನತೆಗೆ ಪ್ರೇರಣೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

# ಮೈಸೂರು ನಗರ ಬಿಜೆಪಿ ಕಾರ್ಯಾಲಯದಲ್ಲಿ ಭಕ್ತಿ ಭಾವದಿಂದ ಶಂಕರ ಜಯಂತಿ ಆಚರಣೆ

**ಮೈಸೂರು**



ಶಂಕರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ,ಸಿಹಿ ವಿತರಿಸಿ,ಶಂಕರಾಚಾರ್ಯರ ಭಜನೆಯನ್ನು ಹಾಡಲಾಯಿತು.

ವಿದ್ಯುಷಿ ನಾಗಲಕ್ಷ್ಮಿಯವರು ಶಂಕರರ ಬದುಕು, ಸಾಧನೆ, ರಚನೆಗಳ ಕುರಿತು ಮಾತಾಡಿದರು. ಅದ್ವೈತ ವೇದಾಂತ, ಇಂದಿಗೆ ಅದರ ಪ್ರಸ್ತುತತೆ, ಅದರಲ್ಲಿ ಪ್ರಸ್ತಾಪಿಸಿರುವ ಸಮಾನತೆ ಸೇರಿದಂತೆ ಅನೇಕ ವಿಚಾರಗಳನ್ನು ಭಾಷಣದಲ್ಲಿ ಮಂಡಿಸಿದರು.

ಶಾಸಕರಾದ ಟಿ ಎಸ್ ಶ್ರೀವತ್ಸರವರು ಮಾತನಾಡಿ ಪಕ್ಷದ ಕಚೇರಿಯಲ್ಲಿ ಅನೇಕ ಮಹಾನುಭಾವರ ಜಯಂತಿಯನ್ನು ಆಚರಿಸುತ್ತೇವೆ, ತನ್ಮೂಲಕ ಪಕ್ಷದ ಕಾರ್ಯಕರ್ತರಿಗೆ ಎಲ್ಲಾ ಮಹನೀಯರ ವಿಚಾರ ತಲುಪಿ ಸಮಾನತೆ, ಭ್ರಾತೃತ್ವದ ಭಾವನೆ ಬೆಳೆಯುತ್ತದೆ ಎಂದು ತಿಳಿಸಿದರು.

ಬಿಜೆಪಿ ನಗರ ಅಧ್ಯಕ್ಷರಾದ ಎಲ್ ನಾಗೇಂದ್ರ, ಪ್ರಕೋಷ್ಠಗಳ ರಾಜ್ಯ ಸಹ ಸಂಚಾಲಕರಾದ ಎನ್ ವಿ ಫನೀಶ್, ವಿಭಾಗ ಪ್ರಭಾರಿ ಸ್ವಾಮಿ ಮರುಳಾಪುರ, ಸಹ-ಪ್ರಭಾರಿ ಡಾ.ಈ.ಸಿ ನಿಂಗರಾಜಗೌಡ, ನಗರ ಪ್ರಧಾನ ಕಾರ್ಯದರ್ಶಿಗಳಾದ ಸಿ.ಕೆ ರುದ್ರಮೂರ್ತಿ, ವಿ. ಸೋಮಸುಂದರ್, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಹೆಚ್.ಜಿ ಗಿರಿಧರ್, ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷರಾದ ರಾಕೇಶ್ ಭಟ್, ಹಿರಿಯ ಮುಖಂಡರಾದ ಗೋಪಾಲ್ ರಾವ್, ಮಾಜಿ ಮಹಾ ಪೌರರಾದ ಶಿವಕುಮಾರ್, ಬ್ರಾಹ್ಮಣ ಸಂಘಟನೆಗಳ ಮುಖಂಡರಾದ ಡಿ ಟಿ ಪ್ರಕಾಶ್, ಡಾ. ಲಕ್ಷ್ಮಿದೇವಿ, ನಂ ಶ್ರೀಕಂಠಕುಮಾರ್, ಕೆ ಆರ್ ಸತ್ಯನಾರಾಯಣ, ಸಾಹಿತಿ ಲೀಲಾ ಪ್ರಕಾಶ್, ಬಿಜೆಪಿ ಪದಾಧಿಕಾರಿಗಳಾದ ಎಂ ಆರ್ ಬಾಲಕೃಷ್ಣ, ಕೆ ಎಂ ನಿಶಾಂತ್, ಬ್ರಾಹ್ಮಣ ಯುವ ಮುಖಂಡರಾದ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಜಯಸಿಂಹ ಸೇರಿದಂತೆ ಬಿಜೆಪಿ ಮಂಡಲ ಅಧ್ಯಕ್ಷರು, ಮೋರ್ಚಾ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ವಿವಿಧ ಬ್ರಾಹ್ಮಣ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದರು.

# ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವ: ಏಪ್ರಿಲ್ 23ರಂದು 270 ಪ್ರಶಸ್ತಿಗಳ ಪ್ರದಾನ

**ಧಾರವಾಡ**



ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ 75ನೇ ವಾರ್ಷಿಕ ಘಟಿಕೋತ್ಸವವು ಏಪ್ರಿಲ್ 23ರಂದು ಬೆಳಿಗ್ಗೆ 11 ಗಂಟೆಗೆ ಗಾಂಧಿ ಭವನದಲ್ಲಿ ನಡೆಯಲಿದೆ ಎಂದು ಕುಲಪತಿ ಪ್ರೊ. ಎ.ಎಂ. ಖಾನ್ ತಿಳಿಸಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದು, ಇಸ್ರೋ ಮಾಜಿ ಅಧ್ಯಕ್ಷ ಪ್ರೊ. ಎ.ಎಸ್. ಕಿರಣಕುಮಾರ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಈ ಘಟಿಕೋತ್ಸವದಲ್ಲಿ 270 ಪ್ರಶಸ್ತಿಗಳು ಪ್ರದಾನವಾಗಲಿದ್ದು, 113 ವಿದ್ಯಾರ್ಥಿಗಳು ಸುವರ್ಣ ಪದಕ, 57 ಮಂದಿ ಪಾರಿತೋಷಕ, 78 ಮಂದಿ ಶಿಷ್ಯವೇತನ ಹಾಗೂ 69 ಮಂದಿ ರ್‍ಯಾಂಕ್ ಪಡೆಯಲಿದ್ದಾರೆ. 252 ಮಂದಿ ಪಿಎಚ್‌ಡಿ ಪದವಿ, 4129 ಮಂದಿ ಸ್ನಾತಕೋತ್ತರ ಹಾಗೂ 24,030 ಮಂದಿ ಸ್ನಾತಕ ಪದವಿ ಪಡೆಯಲಿದ್ದಾರೆ.

# ಚಿತ್ರದುರ್ಗದಲ್ಲಿ ಏ. 22-23ರಂದು ಅಂತರ್ ಮಹಾವಿದ್ಯಾಲಯ ಕಬ್ಬಡಿ ಪಂದ್ಯಾವಳಿ

**ಚಿತ್ರದುರ್ಗ**

ಚಿತ್ರದುರ್ಗದಲ್ಲಿ ಸರಸ್ವತಿ ಕಾನೂನು ಮಹಾವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 22 ಮತ್ತು 23ರಂದು ಹೊನಲು ಬೆಳಕಿನ ಅಂತರ್ ಮಹಾವಿದ್ಯಾಲಯ ಪುರುಷರ ಕಬ್ಬಡಿ ಪಂದ್ಯಾವಳಿ ನಡೆಯಲಿದೆ ಎಂದು ಪ್ರಾಚಾರ್ಯ ಪ್ರೊ. ಡಾ. ಎಂ. ಎಸ್. ಸುಧಾದೇವಿ ತಿಳಿಸಿದ್ದಾರೆ. ರಾಜ್ಯದ ವಿವಿಧ ಕಾನೂನು ಕಾಲೇಜುಗಳಿಂದ ಸುಮಾರು 35 ತಂಡಗಳ 400ಕ್ಕೂ ಹೆಚ್ಚು



ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಏ. 22ರಂದು ಬೆಳಿಗ್ಗೆ ಉದ್ಘಾಟನೆ ನಡೆಯಲಿದ್ದು, ಧ್ಯಾನ್ ಚಂದ್ ಪ್ರಶಸ್ತಿ ವಿಜೇತ ಬಿ.ಸಿ. ಸುರೇಶ್ ಪಂದ್ಯಾವಳಿಗೆ



ಚಾಲನೆ ನೀಡಲಿದ್ದಾರೆ. ಏ. 23ರಂದು ಸಂಜೆ ಸಮಾರೋಪ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

# ಕುಣಿಗಲ್‌ನಲ್ಲಿ ಬಸವೇಶ್ವರರ 895ನೇ ಜಯಂತಿ ಆಚರಣೆ: ಸಮಾನತೆ, ದಾಸೋಹ ಸಂದೇಶ

**:ಕುಣಿಗಲ್**



ಕುಣಿಗಲ್‌ನಲ್ಲಿ ಜಗಜ್ಯೋತಿ ಬಸವೇಶ್ವರರ 895ನೇ ಜಯಂತೋತ್ಸವವನ್ನು ತಾಲೂಕು ಆಡಳಿತ ಮತ್ತು ವೀರಶೈವ ಲಿಂಗಾಯತ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಬಸವೇಶ್ವರರು ದಾಸೋಹ, ಸಮಾನತೆ ಮತ್ತು ಕಾಯಕ ತತ್ವಗಳನ್ನು ಸಾರಿದ ಮಹಾನ್ ಚಿಂತಕರು ಎಂದು ಹೇಳಿದರು.

ಇತರೆ ವಕ್ತಾರರು ಬಸವಣ್ಣನವರು ಜಾತಿ ವ್ಯವಸ್ಥೆ ನಿರ್ಮೂಲನೆ ಹಾಗೂ ಮಹಿಳಾ ಸಮಾನತೆಗೆ ಮಾಡಿದ ಕೊಡುಗೆಗಳನ್ನು ಸ್ಮರಿಸಿದರು. ಸಮಾಜವು ಅವರ ಆದರ್ಶಗಳನ್ನು ಅನುಸರಿಸಬೇಕೆಂದು ಕರೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಲವು ಗಣ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ವಿಶ್ವವೇ ಬಸವಣ್ಣನ ಆಚಾರ ವಿಚಾರಗಳನ್ನು ಕೊಂಡಾಡುತ್ತಿದೆ : ಅರ್ಚಕ ಸಿದ್ದರಾಜು

ದಾಬಸ್‌ಪೇಟೆ : ಅಂತರಂಗದಲ್ಲಿರುವ ದೇವರನ್ನು ಕಾಣುವ ಮತ್ತು ಅನುಭವಿಸುವ ಮಾರ್ಗವನ್ನು ಬಸವಣ್ಣನವರು ನಮಗೆ ಇಷ್ಟಲಿಂಗದ ಮೂಲಕ ನೀಡಿದ್ದಾರೆ. ಸಮಾನತೆ ತತ್ವ, ಸಾಮಾಜಿಕ ಕ್ರಾಂತಿ ಹಾಗು ಅನುಭವ ಮಂಟಪದ ಮುಖಾಂತರ ಎಲ್ಲ ವೃತ್ತಿಯವರಿಗೆ ಸಮಾನವಾಗಿ ಧಾರ್ಮಿಕ ಸ್ವಾತಂತ್ರ್ಯ ನೀಡಿದ ಬಸವಣ್ಣ ಎಲ್ಲರಿಗೂ ಕಲಿಸಿದ ಪುರುಷೋತ್ತಮ ಎಂದು ಬಸವಣ್ಣ ದೇವಾಲಯದ ಅರ್ಚಕ ಸಿದ್ದರಾಜು (ದೇವರು) ತಿಳಿಸಿದರು.

ಸೋಂಪುರ ಹೋಬಳಿಯ ಹೊನ್ನೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ, ಮಹದೇಶ್ವರ ಪರಾವು, ಬಸವಣ್ಣನ ಅಕ್ಕಿಪೂಜೆ. ಕರುಗಲಮ್ಮ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.ವಿಶ್ವವೇ ಬಸವಣ್ಣನ ಆಚಾರ ವಿಚಾರಗಳನ್ನು ಕೊಂಡಾಡುತ್ತಿದೆ. ನಮ್ಮ ಮನೆ ಮನದಲ್ಲಿ ಬಸವಣ್ಣನವರ



ಭಾವಚಿತ್ರಕ್ಕೆ ಜಾಗ ನೀಡಿದರೆ ಸಾಲದು ಅವರ ವಿಚಾರ ಆಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಮುಂದಾಗಬೇಕು. ಬಸವಣ್ಣನವರು ನೀಡಿದ ಪ್ರತಿಯೊಂದು ಆಚಾರ, ವಿಚಾರ, ತತ್ವಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಬಸವೇಶ್ವರ ಟ್ರಸ್ಟ್ ನ ಖಜಾಂಚಿ ಶಿವರಾಜು ಮಾತನಾಡಿ ಪ್ರತಿವರ್ಷದಂತೆ ಮಹಿಳೆಯರೆಲ್ಲರೂ ಸೇರಿ ಅದ್ದೂರಿಯಾಗಿ ಮಹದೇಶ್ವರನ ಪರಾವು, ಬಸವೇಶ್ವರ ದೇವಾಲಯಕ್ಕೆ ಅಕ್ಕಿಪೂಜೆ, ಬಸವಣ್ಣ, ಅಂಜನೇಯ ದೇವರುಗಳ ಮೆರವಣಿಗೆ, ಕರುಗಲ್ಲಮ್ಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಮಹದೇಶ್ವರ ಪರಾವು ಪ್ರಯುಕ್ತ ಶಿವಕುಮಾರ ಸ್ವಾಮೀಜಿಯ ಮಹಾದಾಸೆಯಂತೆ ನೂರಾರು ಜನರಿಗೆ ಕೆತ್ತಹಲಸಿನ ಕಾಯಿ ಸಾಂಬಾರು, ರಾಗಿ ಮುದ್ದೆ ತಯಾರಿಸಿ ಬಡಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಗ್ರಾಮದ ಯುವಕರು, ಹಿರಿಯರು, ಮಹಿಳೆಯರು ಉಪಸ್ಥಿತರಿದರು.

# ಮುದಗಲ್ ಬಸವಣ್ಣ ದೇವಸ್ಥಾನದ ಜಾತ್ರೆ ಸಂಪನ್ನ

ಮುದಗಲ್

ಪಟ್ಟಣದ ಕುಂಬಾರ ಪೇಟೆ ಬಸವಣ್ಣ ದೇವಸ್ಥಾನದ ಜಾತ್ರಾ ಮಹೋತ್ಸವವು ಸೋಮವಾರ ಅದ್ಧೂರಿಯಾಗಿ ಸಂಪನ್ನಗೊಂಡಿತು.

ಬೆಳಿಗ್ಗೆ ಬಸವಣ್ಣ ದೇವಸ್ಥಾನದಲ್ಲಿ ಬಸವಣ್ಣ ಶೀಲಾಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಾಲಾರ್ಪಣೆ ಹಾಗೂ ನಾಮಾವಳಿ ಬಳಿಕ ಮಹಾಮಂಗಳಾರತಿ ನಡೆಯಿತು.

ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಿದವು. 11ದಿನಗಳ ಕಾಲ ನಂದವಾಡಗಿ ಅಭಿನವ ಚನ್ನಬಸವ ಶಿವಾಚಾರ್ಯ ಶಿವಯೋಗಿಗಳ ಅಮೃತ ವಾಣಿಯಲ್ಲಿ ಶ್ರೀ ಗುರುಗುಂಟಾ ಅಮರೇಶ್ವರ ಚರಿತ್ರೆ ಪುರಾಣ ಪಠಾಣ, ಮಹಾಮಂಗಳ ಮಾಡಿದರು. ಜಾತ್ರಾ ಮಹೋತ್ಸವ ನಿಮಿತ್ಯ ವಿವಿಧ ಧಾರ್ಮಿಕ ವೇಷ, ವೀರಗಾಸೆ ಭೂಷಣಗಳು, ಸೇ-ರಿದಂತೆ ಸಕಲ ವಾದ್ಯ ಮೇಳದೊಂದಿಗೆ ಕುಂಭ ಹೊತ್ತ ಮಹಿಳೆಯರಿಂದ ಪಟ್ಟಣದ ಬಿದಿಗಳಲ್ಲಿ ಸಂಚರಿಸಲಾಯಿತು ಹಾಗೂ ಟ್ರ್ಯಾಕ್ಟರ್ ವಾಹನದಲ್ಲಿ ಜಗ ಜ್ಯೋತಿ ಬಸವೇಶ್ವರ ಭಾವಚಿತ್ರ ಮೆರವಣಿಗೆ ನಡೆಯಿತು. ನಂತರ ಭಕ್ತರಿಗಾಗಿ ಅನ್ನ ಸಂತರ್ಪಣೆ ನಡೆಸಲಾಯಿತು. ಸಾಯಂಕಾಲ ವಿವಿಧ ಹೂಗಳು ಮತ್ತು ಹಸಿರು ತೋರಣಗಳಿಂದ ಅಲಂಕರಿಸಿದ ಭವ್ಯ




ರಥಕ್ಕೆ ಶ್ರೀಗಳು, ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಿದರು. ಬಸವೇಶ್ವರರ ಜಯಘೋಷ ಕೂಗುತ್ತ ಭಕ್ತರು ಹಗ್ಗ ಹಿಡಿದು ರಥವನ್ನು ಎಳೆಯುತ್ತಿದ್ದಂತೆ ನೆರೆದ ಭಕ್ತಸಾಗರ ಹೂಹಣ್ಣು-ಉತ್ತತ್ತಿಯನ್ನು ರಥಕ್ಕೆ ಎಸೆದು ಭಕ್ತಿ ಮೆರೆದರು. ಚಲಿಸಿದ ರಥ ಮೇಸ್ತಿ ಪೇಟೆ ಕರಿ ಬಸವಣ್ಣ ಹಾಗೂ ಈಶ್ವರ ದೇವಸ್ಥಾನ ಪಾದಗಟ್ಟೆಗೆ ಸಾಗಿ ಎದುರು ಬಸವಣ್ಣನಿಗೆ ಪೂಜೆ ಸಲ್ಲಿಸಿದ ನಂತರ ಮರಳಿ ರಥವನ್ನು ಯಥಾಸ್ಥಾನಕ್ಕೆ ತಂದು ಮುಕ್ತಾಯಗೊಳಿಸಲಾಯಿತು.

# ಚೋಳಘಟ್ಟದಲ್ಲಿ ಡಿಐಜಿ ದೇವರಾಜ್‌ರಿಂದ ಬಸವಣ್ಣನ ಪುತ್ಥಳಿಯ ಅನಾವರಣಕ್ಕೆ ಗುದ್ದಲಿಪೂಜೆ

ಕೋಲಾರ

ಆಡುಭಾಷೆಯಲ್ಲಿ ವಚನಗಳನ್ನು ಬರೆದ ಬಸವಣ್ಣ ಜನಸಾಮಾನ್ಯರಿಗೆ ಹೆಚ್ಚು ಅರ್ಥ ಆಗುವುದರಿಂದಾಗಿ ಇಂದು ವಚನ ಸಾಹಿತ್ಯ ಹೆಚ್ಚು ಮುನ್ನೆಲೆಗೆ ಬಂದಿರುವುದು ಅನುಭವ ಮಂಟಪದ ಸಾರ್ಥಕ್ಯಕ್ಕೆ ಕಾರಣವಾಗಿದೆ ಎಂದು ಡಿಐಜಿ(ತರಬೇತಿ) ಡಿ.ದೇವರಾಜ್ ಹೇಳಿದರು. ಬಸವ ಜಯಂತಿ ಅಂಗವಾಗಿ ತಾಲೂಕಿನ ಚೋಳಘಟ್ಟ ಗ್ರಾಮದಲ್ಲಿ ಶ್ರೀ ಬಸವೇಶ್ವರ ಪುತ್ಥಳಿ ಅನಾವರಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿ, ಬೀದರ್ ಜಿಲ್ಲೆಯ ಎಸ್ಪಿಯಾಗಿದ್ದಾಗ ಬಸವಕಲ್ಯಾಣದಲ್ಲಿನ ಅನುಭವ ಮಂಟಪ ದರ್ಶನದಿಂದ ಪುಳಕಿತನಾದೆ. ಜಾತಿರಹಿತ ಸಮಾಜ ಕಟ್ಟಲು ಮುಂದಾದ ಬಸವಣ್ಣ ಮಂತ್ರಿಮಂಡಲದಲ್ಲಿ ಎಲ್ಲ ಜಾತಿ,ಧರ್ಮದವರಿಗೆ ಮನ್ನಣೆ ಕೊಟ್ಟಿದ್ದರು. ಸಂಸ್ಕೃತ ಅಂದಿನ ಕಾಲಕ್ಕೆ ಎಲ್ಲರಿಗೂ ಅರ್ಥ ಆಗದ ಕಾರಣ ಸರಳವಾದ ಆಡುಭಾಷೆಯಲ್ಲಿ ವಚನಗಳ ಮೂಲಕ ಸಾಮಾಜಿಕ ಪಿಡುಗುಗಳ ನಿರ್ಮೂಲನೆಗೆ ಮುಂದಾದ ಬಸವಣ್ಣ ವಿರೋಧಕ್ಕೆ ದೃತಿಗೆಡದೆ ಜಾಗೃತಿ ಮೂಡಿಸಿದರು. ಕಾಯಕವೇ ಕೈಲಾಸ, ಸುಳ್ಳು ಹೇಳಬಾರದು, ಮೋಸ ಮಾಡಬಾರದು, ಇತರರ ಮನಸು ನೋಯಿಸಬಾರದು, ಹೊಗಳುಭಟ್ಟರಾಗಬಾರದು ಎಂಬುದನ್ನು



ಜೀವನ ಕ್ರಮದ ಮೂಲಕ ತಿಳಿಸಿಕೊಟ್ಟರು ಎಂದರು. ಜೆಡಿ-ಎಸ್ ಮುಖಂಡ ಖಾಜಿಕಲ್ಲಹಳ್ಳಿ ಹರೀಶ್, ಅಮ್ಮೇರಹಳ್ಳಿ ಚಲಪತಿ, ವೀರಶೈವಲಿಂಗಾಯಿತ ಸಮಾಜದ ಮುಖಂಡರಾದ ಬಸವರಾಜ್, ಚಂದ್ರಪ್ಪ, ನಂಜಪ್ಪ, ಚಿಕ್ಕಚನ್ನಪ್ಪ, ಶಿವಣ್ಣ, ಕೆಆರ್ ಪುರಂ ಮಂಜುನಾಥ್, ಜಯಸುಧ, ಸಂದೀಪ್ ಕುಮಾರ್, ಪ್ರಕಾಶ್, ಮನೋಜ್, ಮುದ್ದಪ್ಪ, ಇರಗಸಂದ್ರ ಆನಂದ್ ಇದ್ದರು.

# ಬಸವಣ್ಣರ ಸಾಮಾಜಿಕ ಕ್ರಾಂತಿ - ಜಾತಿರಹಿತ ಸಮಾಜದ ಕನಸು :ತಹಸೀಲ್ದಾರ್ ಮಂಜುನಾಥ್

ಹುಣಸೂರು

ಸಾಮಾಜಿಕ ಕ್ರಾಂತಿಯ ಮೂಲಕ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಮಾಡಿದ ಬಸವಣ್ಣ ಸಾಮಾಜಿಕ ಕ್ರಾಂತಿಯ ಮೂಲಕ ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಜಾತಿರಹಿತ ಸಮಾಜವನ್ನು ನಿರ್ಮಾಣ ಮಾಡಲು ಬಸವಣ್ಣ ರವರು ಶ್ರಮಿಸಿದ್ದರು ಎಂದು ತಹಸೀಲ್ದಾರ್ ಮಂಜುನಾಥ್ ಹೇಳಿದರು.

ತಾಲ್ಲೂಕು ಆಡಳಿತ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಆಯೋಜನೆ ಮಾಡಿದ್ದ ಬಸವಣ್ಣ ರವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಸಾವಿರಾರು ವರ್ಷಗಳಿಂದ ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ಅಸಮಾನತೆಗಳಿಂದ ನೋವನ್ನು ಅನುಭವಿಸುತ್ತಿದ್ದ ದಲಿತ ಹಿಂದುಳಿದ ಜಾತಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲು ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಅನುಭವ ಮಂಟಪದ ಮೂಲಕ ಅವಕಾಶ ವಂಚಿತ ಸಮುದಾಯಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಲು



ವೇದಿಕೆ ಮಾಡಿ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದಿದ್ದರು. ಬಸವಣ್ಣ ರವರ ತತ್ವ ಸಿದ್ಧಾಂತಗಳನ್ನು ಡಾ. ಬಿ.ಆರ್. ಅಂಬೇಡ್ಕರ್ ರವರು ಸಂವಿಧಾನದಲ್ಲಿ ಅಡಕ ಮಾಡಿದ್ದಾರೆ. ಸೂರ್ಯ ಚಂದ್ರರಿರುವವರೆಗೂ ಬಸವಣ್ಣ ರವರ ಚಿಂತನೆಗಳು ಅಮರವಾಗಿವೆ ಎಂದರು.

ನಗರಸಭಾ ಆಯುಕ್ತ ಮಾನಸ ರವರು ಮಾತನಾಡಿ ಬಸವಣ್ಣರವರು ಮಹಿಳೆಯರ ಬಗ್ಗೆ ಸಮಾನತೆ, ಸಮಾನ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದ್ದರು. ಇವರ ಪ್ರೇರಣೆಯಿಂದ ಡಾ. ಬಿ. ಆರ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಮಹಿಳೆಯರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ ಎಂದರು.

ದಸಂಸದ ರಾಜ್ಯ ಸಂಘಟನಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ ರವರು ಮಾತನಾಡಿ

ಶಿಕ್ಷಣಾಧಿಕಾರಿಗಳಾದ ಕೆ. ಮಹದೇವ್, ಡೆಪ್ಯೂಟಿ ತಹಸೀಲ್ದಾರ್ ಶ್ರೀಪಾದ, ರೈತ ಸಂಘದ ಹೊಸೂರು ಕು, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಖಾಲೀದ್ , ನಾಯಕ ಸಮಾಜದ ಪ್ರಭಾಕರ್ ನಿಲುವಾಗಿಲು, ಡೀಡ್ ಸಂಸ್ಥೆಯ ನಿರ್ದೇಶಕರಾದ ಡಾ. ಶ್ರೀಕಾಂತ್, ಬ್ರಾಹ್ಮಣ ಸಮಾಜದ ವಿ.ಎನ್. ದಾಸ್, ಕಸಬಾ ರಾಜಸ್ವ ನಿರೀಕ್ಷಕ ಶ್ರೀಧರ್, ತಾಲ್ಲೂಕು ಮಟ್ಟದ ಇತರೆ ಅಧಿಕಾರಿಗಳು ಹಾಜರಿದ್ದರು.

# ಬಿಜೆಪಿ ಕಚೇರಿಯಲ್ಲಿ ವಿಶ್ವಗುರು ಬಸವಣ್ಣರ 893ನೇ ಜಯಂತಿ ಆಚರಣೆ

ವಾಡಿ

ಪಟ್ಟಣದ ಬಿಜೆಪಿ ಕಛೇರಿಯಲ್ಲಿ ವಿಶ್ವ ಗುರು ಬಸವಣ್ಣನವರ 893 ನೇ ಜಯಂತಿ ಆಚರಿಸಲಾಯಿತು.

ಈ ವೇಳೆ ಬಿಜೆಪಿ ಅಧ್ಯಕ್ಷ ವೀರಣ್ಣ ಯಾರಿ ಅವರು ಮಾತನಾಡಿ ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯ-ರಿಲ್ಲ ಎನ್ನುವ ಮೂಲಕ ಮಾನವೀಯತೆ ಮತ್ತು ಸಮಾನತೆಯ ತತ್ವಗಳೊಂದಿಗೆ ಜಗ ಬೆಳಗಿದ ಬಸವ ಎಂದರು.

ನಾನು ಎಂಬ ಅಹಂ ಬಿಟ್ಟು ನಾವು ಎಂಬ ಭಾವನೆಯ ಬದುಕು ಸಾಗಿಸಬೇಕು ಎಂದು ತಿಳಿಸಿ,

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹೆಣ್ಣಿನ ಬಗ್ಗೆ ಅತ್ಯಂತ ಅಭಿಮಾನದಿಂದ ದನಿ ಎತ್ತಿದ್ದಾರೆ. ಹೆಣ್ಣಿನ ಬಗ್ಗೆ ಭಾರತೀಯ ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ ಕೀಳುಭಾವನೆಯನ್ನು, ಅಸಮಾನತೆಯನ್ನು ಬಸವಣ್ಣನವರ ಈ ಚಳವಳಿ ತೊಡೆದು ಹಾಕಿದೆ. ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಯ ಸಮಾನ ಎಂದು ಸಾರುವ ಮೂಲಕ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಹಿರಿಮೆ ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ ಎಂದರು.

ವರ್ಣರಹಿತ ಸಮಾಜ ನಿರ್ಮಾಣ,

ಅಸ್ಪೃಶ್ಯತೆ ನಿವಾರಣೆ, ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆ, ಲಿಂಗ ಸಮಾನತೆ, ಕಾಯಕ ಮತ್ತು ದಾಸೋಹದ ಮೂಲಕ ಆರ್ಥಿಕ ನ್ಯಾಯ, ವಚನಗಳಲ್ಲಿ ಮಾನವ



ಹಕ್ಕುಗಳ ಪ್ರತಿಪಾದನೆ, ಅಂತರಜಾತೀಯ ವಿವಾಹದಂತಹ ಕ್ರಾಂತಿಕಾರಕ ಕಾರ್ಯಗಳನ್ನು ಮಾಡುವ ಮೂಲಕ ಸೃಷ್ಟಿಯಲ್ಲಿ ಸರ್ವರಿಗೂ ಸಮಪಾಲು ಎಂದು ಸಾರಿದ ಸಾಂಸ್ಕೃತಿಕ ನಾಯಕ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯಮನಪ್ಪ ಸವನಳ್ಳಿ,ಶರಣಗೌಡ ಚಾಮನೂರ,ಅಶೋಕ ಹರನಾಳ,ಅರ್ಜುನ ಕಾಳೆಕರ,ಗಿ-ರಿಮಲ್ಲಪ್ಪ ಕಟ್ಟಿಮನಿ,ಭೀಮರಾವ ದೊರೆ,

ಪ್ರಕಾಶ ಪುಜಾರಿ,ಹರಿ ಗಲಾಂಡೆ,ಆಯ್ಯಣ್ಣ ದಂಡೊತಿ,ಮಲ್ಲಿಕಾರ್ಜುನ ಸಾತಖೇಡ,ಯಂಕಮ್ಮ ಗೌಡಗಾಂವ,ನಿರ್ಮಲ ಇಂಡಿ,ಉಮಾಭಾಯಿ ಗೌಳಿ ಸೇ-ರಿದಂತೆ ಇತರರು ಇದ್ದರು.

# ಡಾ. ಹೆಚ್.ಸಿ ಮಹದೇವಪ್ಪರ 74ನೇ ಹುಟ್ಟುಹಬ್ಬ: ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲ ವಿತರಣೆ

:ತಿ.ನರಸೀಪುರ

ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ ಮಹದೇವಪ್ಪ ರವರ 74ನೇ ಹುಟ್ಟುಹಬ್ಬವನ್ನು ಪ್ರಯುಕ್ತ ಅಭಿಮಾನಿಗಳು, ಕಾರ್ಯಕರ್ತರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲ ವಿತರಿಸಿದರು.

ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಡಾ. ಹೆಚ್.ಸಿ. ಮಹದೇವಪ್ಪ ರವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಸರ್ಕಾರಿ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಹಣ್ಣು ಹಂಪಲ ನೀಡಿಲಾಯಿತು.

ಮಧ್ಯಾಹ್ನ 12:30 ಸಮಯದಲ್ಲಿ ಸಚಿವರ ಹಾಗೂ ಸಂಸದರ ಆಪ್ತ ಸಹಾಯಕ ಬಸವರಾಜು ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಸಿಹಿಹಂಚಿ ಸಂಭ್ರಮಿಸಿದರು.

ತಾ.ಪಂ. ಮಾಜಿ ಅಧ್ಯಕ್ಷ ದೊಡ್ಡೇಬಾಗಿಲು ಮಲ್ಲಿಕಾರ್ಜುನ ಮಾತನಾಡಿ ಹಿರಿಯ ರಾಜಕೀಯ ಮುತ್ಸದಿ ಇವರು ಯಾವುದೇ ಸಚಿವ ಸ್ಥಾನ ನೀಡಿದರು ಬಹಳ ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಅದರಲ್ಲೂ ಲೋಕೋಪಯೋಗಿ ಸಚಿವರಾಗಿದ್ದಾಗ ಇಡೀ ದೇಶವೇ ಕರ್ನಾಟಕ ರಾಜ್ಯದತ್ತ ನೋಡುವಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿ. ನಂಬರ್ ಒನ್ ಸಚಿವ ಎಂಬ ಹೆಸರಿಗೆ ಪಾತ್ರರಾಗಿದ್ದಾರೆ. ಆದ್ದರಿಂದ



ದೇವರು ಆಯಸ್ಸು ಆರೋಗ್ಯವನ್ನು ನೀಡಿ ಮುಂದಿನ ದಿನದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.

ತಾಲ್ಲೂಕು ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್ ಮಾತನಾಡಿ

ಡಾ. ಹೆಚ್ ಸಿ ಮಹದೇವಪ್ಪ ಅವರು ಬುದ್ಧ ಬಸವ ಅಂಬೇಡ್ಕರ್ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಧೀಮಂತ ರಾಜಕಾರಣಿ ಸಾಮಾಜಿಕ ನ್ಯಾಯದ ಹ-ರಿಕಾರರು ಸಂವಿಧಾನದ ಆಶ್ರಯದಂತೆ ಎಲ್ಲರಿಗೂ ಸಮಪಾಲು ಎಲ್ಲರಿಗೂ ಸಮಬಾಳು ಎಂಬ ತತ್ವದ ಅಡಿಯಲ್ಲಿ ರಾಜಕಾರಣ ಮಾಡುವ ರಾಜಕಾರಣಿ 40 ವರ್ಷಗಳ ಸುದೀರ್ಘ ರಾಜ-ಕಾರಣದಲ್ಲಿ ಕಪ್ಪು ಚುಕ್ಕೆ ಇಲ್ಲದೆ ರಾಜ-ಕಾರಣ ಮಾಡಿರುವ ಏಕೈಕ ರಾಜ-ಕಾರಣಿ ಮಹಾದೇವಪ್ಪನವರು ಎಂದು ಹೇಳಿದರು.

ಸಂದರ್ಭದಲ್ಲಿ ತಾ. ಪಂ. ಮಾಜಿ ಅಧ್ಯಕ್ಷ ಹ್ಯಾಕನೂರು ಉಮೇಶ್, ಮೈಮುಲ್ ಮಾಜಿ ಅಧ್ಯಕ್ಷ ಚಲುವರಾಜು, ತಾಲ್ಲೂಕು ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ರಾಮಲಿಂಗಯ್ಯ, ಹೊನ್ನ ನಾಯಕ. ಮಹದೇವಸ್ವಾಮಿ, ರಂಗಸ್ವಾಮಿ, ಚಿನ್ನಸ್ವಾಮಿ, ಕಲಿಯೂರು ಶಿವಣ್ಣ, ಕೊಳತ್ತೂರು ಕುಮಾರ, ಲಕ್ಷ್ಮಣ ಶಿವಕುಮಾರ್, ಚಿಕ್ಕಸ್ವಾಮಿ, ಕೋಕಿಲ, ಶಿವಮ್ಮ, ಮಹೇಶ, ಪ್ರಸನ್ನ, ಸಿದ್ಧಶೆಟ್ಟಿ, ಸಿ ಮಹದೇವ, ಅನೂಪ್, ಹಾಗೂ ಅಭಿಮಾನಿಗಳು ಕಾರ್ಯಕರ್ತರು ಹಾಜರಿದ್ದರು.

# ಗುಂಡಿಕ್ಕಿ ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರ ಹತ್ಯೆ

ವಾಡಿ

ಸ್ಕೂಟಿ ಮೇಲೆ ಹೋರಟಿದ್ದ ವ್ಯಕ್ತಿ ವ್ಯಕ್ತಿ ಮೇಲೆ ಆಗುಂತಕರ ಗುಂಪೊಂದು ಗುಂಡು ಹಾರಿಸಿ ಮಾರಕಾಸ್ತ್ರಗಳಿಂದಿ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿದ ಘಟನೆ ಸಾರ್ವಜನಿಕರನ್ನು ಬೆಚ್ಚಿಬಿಳಿಸಿದ ಘಟನೆ.ಸೋಮವಾರ ಮಧ್ಯಾಹ್ನ ಬಲರಾಮ ಚೌಕ್ ಸಮೀಪ ಸಂಭವಿಸಿದೆ.

ಪಟ್ಟಣದ ಭಾಯಿಭಾಯಿ ಗ್ರೂಪ್ ನ ಅಧ್ಯಕ್ಷ ಲಾರಿ ಮಾಲಿಕರ ಸಂಘದ ಮಾಜಿ ಅಧ್ಯಕ್ಷ ಮಹ್ಮದ್ ಇರ್ಫಾನ್ (40) ಕೊಲೆಯಾದ ದುರ್ದೈವಿ ವ್ಯಕ್ತಿ

ಮೃತ ಇರ್ಫಾನ್ ಸ್ಕೂಟಿ ಹತ್ತಿ ಬಲರಾಮ ಚೌಕದಿಂದ ಬರುತ್ತಿರುವಾಗ ಶಿಫ್ಟ್ ಕಾರಿನಲ್ಲಿ ಬಂದ ದುಷ್ಕರ್ಮಿಗಳು ಸ್ಕೂಟಿ ಗೆ ಗುದ್ದಿದ್ದಾರೆ ಡಿಕ್ಕಿಯ ರಭಸಕ್ಕೆ



ಕೆಳಗೆ ಬಿದ್ದ ಇರ್ಫಾನ್ ಮೇಲೆ ಗುಂಡು ಹಾರಿಸಿದ್ದಾರೆ ನಂತರ ಕತ್ತಿ,ಮಚ್ಚುಗಳಿಂದ ಎರ್ರಾಬಿರ್ರಿ ಕೊಚ್ಚಿ ಕೊಲೆ ಮಾಡಿದ್ದಾರೆ.

ಕೃತ್ಯಕ್ಕೆ ಹಳೆಯ ವೈಷಮ್ಯವೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ

ಕೃತ್ಯಕ್ಕೆ ಬಳಿಸಿದ ಮಾರಕಾಸ್ತ್ರಗಳನ್ನು ಸ್ಥಳದಲ್ಲೇ ಬಿಸಾಕಿ ತಮ್ಮನ್ನು ಹಿಂಬಾಲಿಸುತ್ತಿದ್ದ ಮತ್ತೊಂದು ಕಾ-ರಿನಲ್ಲಿ ಪರಾರಿಯಾಗಿದ್ದಾರೆ ಎಂದು ತಿಳಿದುಬಂದಿದೆ.

ಘಟನಾ ಸ್ಥಳಕ್ಕೆ ಹೆಚ್ಚುವರಿ ಎಸ್.ಪಿ ಮಹೇಶ ಮೇಘಣ್ಣನವರ, ಡಿವೈಎಸ್ಪಿ ಶಂಕರೇಗೌಡ ಪಾಟೀಲ್, ಸಿಪಿಐ ಸಿ ಎಸ್ ಪಾಟೀಲ್ ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ. ಆರೋಪಿಗಳ ಪತ್ತೆಗಾಗಿ ಪೊಲೀಸರು ವ್ಯಾಪಕ ಶೋಧ ನಡೆಸಿದ್ದಾರೆ

# ಜಿಲ್ಲಾಡಳಿತದಿಂದ ಅದ್ದೂರಿ ಬಸವ ಜಯಂತಿ ,ವಚನ ಸಾಹಿತ್ಯದಿಂದ ಬದ್ಧತೆ, ಪ್ರಾಮಾಣಿಕತೆ, ಮೌಲ್ಯಗಳ ಅನುಸರಣೆ ಸಾಧ್ಯ : ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ

ಕೋಲಾರ

ಬಸವಣ್ಣನವರ ವಚನ ಸಾಹಿತ್ಯ ಜನರಲ್ಲಿ ಬದ್ಧತೆ, ಪ್ರಾಮಾಣಿಕತೆ ಮತ್ತು ಮೌಲ್ಯಗಳನ್ನು ಅನುಸರಿಸಲು ಸಹಕಾ-ರಿಯಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್.ರವಿ ಹೇಳಿದರು.

ಜಿಲ್ಲಾಡಳಿತದಿಂದ ನಡೆದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿ, ಬಸವಣ್ಣ ಆಡು ಭಾಷೆಯಲ್ಲಿ ಸಾಮಾನ್ಯರಿಗೆ ಅರ್ಥ ಆಗುವ ರೀತಿಯಲ್ಲಿ ನೀಡಿರುವ ವಚನ ಸಾಹಿತ್ಯ ಸಮಾಜದ ಕಟ್ಟ ಕಡೆಯ ಜನರರಿಗೂ ತಲುಪುವಂತಾಗುವ ಮೂಲಕ ಹೆಚ್ಚು ಪ್ರಸ್ತುತವಾಗಿದೆ ಎಂದರು.

ಸಮಾನತೆಯ ಕಾಯಕ ಮತ್ತು ಸತ್ಯದ ಮೇಲೆ ಹೋರಾಡುತ್ತಿದ್ದ ಶಿವಶರಣರ ವಿರುದ್ಧ ಷಡ್ಯಂತ್ರ ಕೆಲಸ ಮಾಡಲಿಲ್ಲ. ಅಸಮಾನತೆ,ಜಾತೀಯತೆ ಬಗ್ಗೆ ಬರೆದ ವಚನಗಳು ಆತ್ಮಸಾಕ್ಷಿಯನ್ನೇ ತಟ್ಟಿದ್ದು ಹೀಗಾಗಿ ಬಸವಣ್ಣ ಸಾಮಾಜಿಕ ಬದಲಾವಣೆಯ ಹರಿಕಾರರಾದರು.

ನುಡಿದಂತೆ ನಡೆದ ಬಸವಣ್ಣನನ್ನು ಸಮಾಜ ಬದುಕಲು ಬಿಡಲಿಲ್ಲ.

ಇಂದು ಸಮಾನತೆ ಕೇಳುವ ನಾವು ಬಸವಣ್ಣನ ನಿಲುವಿನ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕಾಯಕ, ಆದರ್ಶ, ಸಮಾನತೆಯನ್ನು ಮರೆತಿರುವ ಜನತೆ ಬಸವಣ್ಣನ ತತ್ವಗಳ ವಿರುದ್ಧ ಹೊರಟಿದ್ದು ಸತ್ಯ, ಪ್ರಾಮಾಣಿಕ ದುಡಿಮೆ ಮೂಲಕ ಜನತೆ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬೇಕು. ಶರಣರ ಸಾಹಿತ್ಯ ಮತ್ತು ವಚನಗಳು ಮನಸಿಗೆ ಹತ್ತಿರವಾಗುವ ಜತೆಗೆ ಸಮಾಜವನ್ನು ಒಂದು ಮಾಡುತ್ತದೆ. ಜಾತಿ ಮತ್ತು ಅಸಮಾನತೆ ತೊಲಗಿದಾಗ ಹುಟ್ಟಿಗೆ ಅರ್ಥ ಬರುತ್ತದೆ.

ಮನುಷ್ಯ ಮನುಷ್ಯನಾಗಿ ಬದುಕುವ ಮೂಲಕ ಸಮಾಜದಲ್ಲಿ ಒಂದಾಗಿ



ಎಲ್ಲರೊಂದಿಗೆ ಒಟ್ಟಾಗಿ ಸಹಬಾಳ್ವೆ ನಡೆಸಲು ಸಾಧ್ಯವಾಗುತ್ತದೆ ಎಂದು ಡಿಸಿ ರವಿ ಹೇಳಿದರು.

ನಾಗಲಾಪುರ ಮಠದ ತೇಜೇಶಲಿಂಗ ವೀರಶೈವ ಶ್ರೀಗಳು ಮಾತನಾಡಿ, ಬಸವಣ್ಣನವರ ವಚನ ಸಾಹಿತ್ಯದ ಮೂಲಕ ಜೀವನವನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಅಸಮಾನತೆ, ಜಾತಿಯತೆ, ಮೇಲುಕೀಳು ಭಾವನೆಗಳನ್ನು ಬಿಟ್ಟು ಎಲ್ಲರೂ ಒಂದೇ ಎಂದು ತಿಳಿದು ಜೀವನವನ್ನು ನಡೆಸಬೇಕು. ಅಸಮಾನತೆ, ಜಾತೀಯತೆ ಮುಂತಾದವುಗಳನ್ನು ಮನಸಿಂದ ತೊಡೆದು ಹಾಕಿ ಸಮಾಜದಲ್ಲಿ ಶಾಂತಿಯಿಂದ ಜೀವನವನ್ನು ನಡೆಸಲು ನಿರ್ಧರಿಸಬೇಕು ಎಂದು ಶ್ರೀಗಳು ಹೇಳಿದರು.

ಸಮಾಜ ಸೇವಕ ಸಿಎಂಆರ್ ಶ್ರೀನಾಥ್ ಮಾತನಾಡಿ, ಜಾತಿ,ಅಸಮಾನತೆಯನ್ನು ಹೋಗಲಾಡಿಸಿ ಸಹಭಾಳ್ವೆಯ ಸತ್ಯ ಸಂದೇಶ ನೀಡಿದ ಬಸವಣ್ಣನ ವಚನಗಳು ಇಂದು ಜಾಗತಿಕ ಮಟ್ಟದಲ್ಲೂ ಮನ್ನತೆ ಪಡೆದುಕೊಂಡಿದ್ದು ಅನುಭವ ಮಂಟಪದ ಮೂಲಕ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ನಿಲುವು ತಾಳಿದ ಮಾನವತಾವಾದಿ ನಡೆಗೆ ಇಂದು ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ. ಹೀಗಾಗಿ ಪರಿವರ್ತನೆ ಮೂಲಕ ಸಮಾಜದಲ್ಲಿ ಸುಧಾರಣೆ ಕಾಣಲು ನಾವೆಲ್ಲಾ ಪಣ ತೊಡಬೇಕಾಗಿದೆ ಎಂದು ಶ್ರೀನಾಥ್ ನುಡಿದರು.

ಉಪನ್ಯಾಸಕ ನಾಗಾನಂದಕೆಂಪರಾಜ್ ಬಸವಣ್ಣನ ಕುರಿತು ಮಾತನಾಡಿದರು. ಸಾಧಕರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕ ರವಿಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮಿ , ವಾರ್ತಾ ಇಲಾಖೆ ಅಧಿಕಾರಿ ಮಂಜೇಶ್,

ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಘಟಕದ ಸೆಂಟ್ರಲ್ ಕಮಿಟಿ ಮಾಜಿ ಉಪಾಧ್ಯಕ್ಷೆ ಪ್ರಮೀಳಾಮಲ್ಲಿಕಾರ್ಜುನ್, ವೀರಶೈವ ಲಿಂಗಾಯಿತ ಸಮಾಜದ ಮುಖಂಡರಾದ ಚನ್ನಪ್ಪ, ಪಿಟಿಐ ಸುರೇಶ್, ಒಡೆಯರ್, ರಾಮಸಂದ್ರ ಕುಮಾರ್, ಬಿಜೆಪಿ ಶಿವಕುಮಾರ್, ಪತ್ರಕರ್ತ ನವೀನ್‌ಕುಮಾರ್ ಇದ್ದರು.

Editor:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Publisher:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Printer:S.K.Wadeyar, SUCHITHRA PRINTERs & PUBLISHERs # 69 "VISPATHI",B,Block S.O.G.Colony Davanagere-577005,Karnataka
Owner:S.K.Wadeyar, #69 "VISPATHI", B,Block S.O.G.Colony, Davanagere-577005,Karnataka